## ಪುಟ್ಟು ಕಂಡ ಸ್ವಾತಂತ್ರ್ಯ

ಕಾವ್ಯರಶ್ಮಿ

– ಕಮಲಾ ಜಿ.ಹೆಗಡೆ, ಕೊಂಡದ ಕುಳಿ

ಪುಟ್ಟು ಅಂದು ತಟ್ಟನೆದ್ದ
ಸಡಗರದಾದಿನ ಇಂದೆ !
ಅಪ್ಪ ತಂದ ಹ್ಯಾಟು ಬೂಟು
ತೊಡುವ ಯೋಗ ಅದೊಂದೆ !
ಬಿಳಿ ಬಿಳಿ ಉಡುಪು ಶೋಭೆಯ ತಂದಿತು
ಹುಣ್ಣಿಮೆ ಚಂದ್ರನ ಮೊಗಕೆ !
ನೆಚ್ಚಿನ ಶಾಲೆ ಗೆಳೆಯರ ಕೂಡ
ಎಲ್ಲಾ, ತೋರಿನಲಿವ ಬಯಕೆ !
ಟೀಚರಮ್ಮ ಗತ್ತು ತೋರೆ,
ತನ್ನೇ, ಮರೆತು ಕುಳಿತ ಘಳಿಗೆ !
ಎಂದೂ ಇರದ ಶಿಸ್ತು ನೋಡಿ,
ಅದೇಕೊ ಸುಸ್ತು ಅವಗೆ !

ಸರದಿಯಂತೆ ಹಾಡು, ಕುಣಿತ
ಭಾಷಣದ ಸುರಿಮಳೆ !
ಅರ್ಥವಾಗದಿದ್ದರೇನು? ತಾ,
ಹೊಡೆದೆ ಹೊಡೆದ ಚಪ್ಪಾಳೆ !
ಕೊನೆಗೆ ಸಿಗುವದಲ್ಲ ಹೇಗೂ
ಎರಡೆರಡು ಚಾಕಲೇಟು !
ಕಣ್ಣೆದುರಿಗೆ ಯಾಕೋ ಕಾಣುತ್ತಿತ್ತು,
ಸ್ಕೂಲಿನೆದುರಿನ ಗೇಟು !

ಬಂದ ಗಣ್ಯರೆದುರು ಶಾಲೆ
ಮಾನ ಉಳಿಸುವಂತೆ,!
ಪಿ.ಟಿ.ಮೇಸ್ತ್ರು ಕೆಂಪುಗಣ್ಣು
ಆಗಾಗ ಪುಟ್ಟುವೆಡೆಗೆ !
ಉಸಿರು ಕಟ್ಟುವಂತ ಮೌನ
ಮಂಜಾಯ್ತು ಪುಟ್ಟ ಕಣ್ಣು !
ಸ್ವಾತಂತ್ರ್ಯ ಸುಖವ ತರಲೇ ಇಲ್ಲ,
ಬಟ್ಟೆಯಾಯ್ತು ಮಣ್ಣು !

## ಭಾರತದ ಉತ್ಪನ್ನ ಅಮೆರಿಕದಲ್ಲಿ ನಂ.1

'ವಿ'ಷಯ 'ವಿ'ಶೇಷ

ಕೇರಳ ಮೂಲದ 'ಟೇಸ್ಟಿ ಚಾಯ್ಸ್ ಸಮೂಹ'ದ ಸಿದ್ಧ ಆಹಾರ ಉತ್ಪನ್ನ ಅಮೆರಿಕದಲ್ಲಿ ನಂ.1 ಸ್ಥಾನ ಗಳಿಸಿದೆ. ನೀಲ್ಸನ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದ್ದು ಟೇಸ್ಟಿ ಚಾಯ್ಸ್ ಸಂಸ್ಥೆಯ ಸಿಗಡಿ ಖಾದ್ಯಕ್ಕೆ ಅಮೆರಿಕದಲ್ಲಿ ಭಾರೀ ಬೇಡಿಕೆ ಇದೆಯಂತೆ. ಭಾರತೀಯ ಕಂಪೆನಿಯ ಉತ್ಪನ್ನವೊಂದು ಅಮೆರಿಕದ ಮಾರುಕಟ್ಟೆಯಲ್ಲಿ ಅಗ್ರಮಾನ್ಯ ಗಳಿಸಿರುವುದು ಇದೇ ಮೊದಲು.


## ವಿಳಾಸ

**ರಾಮಚಂದ್ರ ಹೆಗಡೆ ಸಿ.ಎಸ್, "ನೆನಪು" ನಂ.33,(172/3), 3ನೇ 'ಸಿ' ಅಡ್ಡರಸ್ತೆ,**
**ಕತ್ರಿಗುಪ್ಪಾ ಮುಖ್ಯರಸ್ತೆ, ವಿವೇಕಾನಂದನಗರ, ಬೆಂಗಳೂರು – 560 085.**
**ದೂರವಾಣಿ : 9986372503 Email:contact@chaitrarashmi.com,**
**Web: www.chaitrarashmi.com**

Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHITRA PRINTERS, 193, Link Road, Malleswaram, Bangalore- 560 003.





RNI KAR KAN/2006/19109
MAG (3)/NPP/272/2005-06


ಸೃಜನಶೀಲತೆಯ ಹುಡುಕಾಟದಲ್ಲಿ....................

# ಚೈತ್ರರಶ್ಮಿ

ಕನ್ನಡ ಮಾಸಿಕ
ಆಗಸ್ಟ್ ೨೦೦೮

- A RAY OF HOPE



ಸೃಜನಶೀಲತೆಯ ಹುಡುಕಾಟದಲ್ಲಿ.....

RNI KAR KAN/2006/19109
MAG (3)/NPP/272/2005-06

CHAITRA RASHMI
Kannada Monthly

ಚೈತ್ರರಶ್ಮಿ - A RAY OF HOPE

EDITOR: RAMACHANDRA HEGDE.C.S.

ಸಂಪಾದಕ: ರಾಮಚಂದ್ರ ಹೆಗಡೆ. ಸಿ.ಎಸ್.

ಸಂಪುಟ: 4 ಸಂಚಿಕೆ: 11 ಆಗಸ್ಟ್ 10, 2008 ಪುಟ: 16 ಬೆಲೆ: ರೂ. 5.00

Volume: 4 Issue: 11 August 10, 2008 Pages: 16 Rs. 5.00


# ಸದ್ದಿಲ್ಲದೆ "ಭಾರತ" ಕಟ್ಟುತ್ತಿರುವ ಅಂತಹ ಮಹನೀಯರಿಗೆ ನಮನ

**ಅಂತರಂಗದಿಂದ**

ಡಾ|| ಹರೀಶ್ ಹಂದೆ. ಈ ಹೆಸರು ನಮ್ಮಲ್ಲಿ ಬಹುತೇಕರಿಗೆ ಗೊತ್ತಿರಲಿಕ್ಕಿಲ್ಲ. ಸದ್ದಿಲ್ಲದೆ, ಯಾವ ಸುದ್ದಿಯ ಹಂಗಿಗೂ ಬೀಳದೆ ನಿಶ್ಯಬ್ದವಾಗಿ 'ಭಾರತ' ಕಟ್ಟುತ್ತಿರುವ ಲಕ್ಷಾಂತರ ಮಹನೀಯರಲ್ಲಿ ಡಾ|| ಹರೀಶ್ ಹಂದೆ ಕೂಡಾ ಒಬ್ಬರು. ಐಐಟಿ ಕರಗ್‌ಪುರದಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ಹರೀಶ್ ಹಂದೆ ನಂತರ ಮೆಸಾಚುಸೆಟ್ಸ್ ವಿ.ವಿಯಲ್ಲಿ ಪಿ.ಎಚ್.ಡಿ ಅಧ್ಯಯನ ಆರಂಭಿಸಿದರು. ಈ ನಡುವೆ ಪ್ರವಾಸಕ್ಕೆ ತೆರಳಿದಾಗ ಭಾರತಕ್ಕಿಂತಲೂ ಹೆಚ್ಚು ಬಡಜನರನ್ನು ಹೊಂದಿರುವ ಡೊಮಿನಿಯನ್ ರಿಪಬ್ಲಿಕ್‌ನಲ್ಲಿ ಸೌರಶಕ್ತಿಯ ಬಳಕೆ, ಪ್ರಯೋಜನಗಳನ್ನು ಕಂಡು ಅಚ್ಚರಿಗೊಂಡ ಅವರು ಮುಂದೆ ಸೌರಶಕ್ತಿಯ ಕುರಿತು ವಿಶೇಷ ಅಧ್ಯಯನ ನಡೆಸಿ ಅದೇ ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದರು. ವಿದೇಶದಲ್ಲಿ ಡಾಕ್ಟರೇಟ್ ಗಳಿಸಿದರೂ ಬಹುತೇಕರಂತೆ ಅಲ್ಲೇ ಉಳಿದುಹೋಗದೆ ಭಾರತಕ್ಕೆ ಮರಳಿದ ಹಂದೆ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಸೌರಶಕ್ತಿಯಿಂದ ವಿದ್ಯುತ್ ಮತ್ತು ಇತರ ಉಪಯೋಗಗಳ ಕುರಿತು ಸಂಶೋಧನೆ ಆರಂಭಿಸಿದರು. ಅವರ ಹಲವು ವರ್ಷಗಳ ಸಂಶೋಧನೆ, ಕನಸುಗಳ ಪರಿಣಾಮವಾಗಿ ಆರಂಭಗೊಂಡಿದ್ದು ಅವರ 'ಸೆಲ್ಕೊ ಇಂಡಿಯಾ ಕಂಪನಿ'. ದೇಶದ ಬಡಜನರ ಕುರಿತ ಅವರ ಕಾಳಜಿ ವಿಶೇಷವಾದದ್ದು, ಹಾಗಾಗಿಯೇ ಸೆಲ್ಕೊ ಬಡಜನರಿಗಾಗಿಯೇ ಅತ್ಯಂತ ಕಡಿಮೆ ವೆಚ್ಚದ ಸೌರ ವಿದ್ಯುತ್ ಉಪಕರಣಗಳನ್ನು ಉತ್ಪಾದಿಸುತ್ತಿದೆ. ಸೌರಶಕ್ತಿಯ ವಿದ್ಯುತ್ ಅನ್ನು ಬಡವರಿಗೆ ತಲುಪಿಸುವುದು, ಅದಕ್ಕೆ ಹಲವಾರು ಬ್ಯಾಂಕ್‌ಗಳು ಹಾಗೂ ಸ್ವಸಹಾಯ ಸಂಘಗಳ ಮೂಲಕ ಆರ್ಥಿಕ ಸಹಾಯ ನೀಡುವುದು. ಆ ಆರ್ಥಿಕ ಸಹಾಯ ತೀರುವವರೆಗೂ ಅದು ಅವರಿಗೆ ಹೊರೆಯಾಗದಂತೆ ಬೆಂಬಲ ನೀಡುವುದು, ಒಟ್ಟಾರೆಯಾಗಿ ಭಾರತದ ಬಡ ಗ್ರಾಮೀಣ ರೈತರಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಸೌರವಿದ್ಯುತ್‌ನ ಪ್ರಯೋಜನಗಳು ತಲುಪುವಂತೆ ಮಾಡುವುದು ಸೆಲ್ಕೊನ ಪ್ರಮುಖ ಉದ್ದೇಶ. ಡಾ|| ಹರೀಶ್‌ರ ದೂರದೃಷ್ಟಿತ್ವದಿಂದಾಗಿ ಸೆಲ್ಕೊ ಈ ಕಾರ್ಯದಲ್ಲಿ ಅಪರಿಮಿತ ಯಶಸ್ಸು ಗಳಿಸಿದೆ. ಕರ್ನಾಟಕ, ಕೇರಳ, ಗುಜರಾತ್ ರಾಜ್ಯಗಳ ೮೦ ಸಾವಿರಕ್ಕೂ ಅಧಿಕ ಬಡ ಹಾಗೂ ಮಧ್ಯಮ ವರ್ಗದ ಗ್ರಾಮೀಣ ರೈತರು ಸೌರಶಕ್ತಿಯ ವಿದ್ಯುತ್ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ. ೨೦೦೫ ರ 'ಆ್ಯಶ್‌ಡೆನ್ ಅವಾರ್ಡ್' ಪ್ರಶಸ್ತಿಗೆ ಭಾಜನರಾಗಿರುವ ಡಾ|| ಹರೀಶ್ ಹಂದೆ ದೇಶದ ೧೦ ಲಕ್ಷಕ್ಕೂ ಅಧಿಕ ಮಂದಿಗೆ ಈ ಪ್ರಯೋಜನಗಳನ್ನು ತಲುಪಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಸದ್ದಿಲ್ಲದೆ 'ಭಾರತ' ಕಟ್ಟುತ್ತಿರುವ ಇಂತಹ ಲಕ್ಷಾಂತರ ಮಹನೀಯರಿಗೆ ನಮ್ಮ ನಮನ.

ನಿಮ್ಮವನು – **ರಾಚಂ**





# ವಂದೇ..................ಮಾತರಂ

– ಪ್ರಿಯಾ ಎಂ. ಭಟ್, ಕುಮುಟಾ

ವಂದೇ.....ಮಾತರಂ........ವಂದೇ.........ಮಾತರಂ
ಭಾವಭಾಷೆಗಳ ಭೇಧವಿಲ್ಲದೇ ಹಾಡೋಣ ಬನ್ನಿ
ಜೀವ ಜೀವಗಳ ಬೆಸೆಯುವಾ ಪ್ರೀತಿ ತನ್ನಿ
ಬನ್ನಿ ದೇಶ ಬಾಂಧವರೇ ಬನ್ನಿ ಭಾರತೀಯರೇ
ಮೊಳಗಲಿ ಒಂದೇ ಉಸಿರಲಿ
ವಂದೇ.........ಮಾತರಂ.........ವಂದೇ...ಮಾತರಂ.



ಭಾನು ಭೂಮಿಗೆ, ಸಸ್ಯ ಶ್ಯಾಮಲೆಗೆ
ನಮನವೀಯುತಾ ನಡೆದು ಬನ್ನಿ
ಮೆಟ್ಟಿ ನಡೆಯುವಾ ತಾಯ ಮಡಿಲಿಗೆ
ಭಾರವೀಯದೇ ಮೆತ್ತ ಬನ್ನಿ.
ಹೆಜ್ಜೆ ಹೆಜ್ಜೆಗಳು ಕೂಡಿ ನಡೆಯಲಿ
ಹೊನ್ನ ಹೂಮಳೆ ಭುವಿಗೆ ಸುರಿಯಲಿ
ಧಮನಿ ಧಮನಿಗಳು ನಿಮಿರಿ ನಿಲ್ಲಲಿ.
ಮೊಳಗಲಿ ಒಂದೇ ಉಸಿರಲಿ
ವಂದೇ .............ಮಾತರಂ...........

ಹಸಿಯ ಮಣ್ಣಿನಲಿ ಹೊಸದು ಕನಸಿರಲಿ
ರಕ್ತ ಕ್ರಾಂತಿಗಳ ಕನಸು ಬರದಿರಲಿ
ದೇಶ ಭಾಷೆಗಳು ಕೂಡಿ ಕಲೆತಿರಲಿ,
ರಾಕ್ಷಸರ ಪೀಡೆ ತೊಲಗಿಸಲಿ
ಎತ್ತ ನೋಡಿದರೂ ಒಂದೇ ಬಾನು,
ಎತ್ತ ಹಾಡಿದರೂ ಒಂದೇ ಭಾವ
ರಾಷ್ಟ್ರದುನ್ನತಿಗೆ ಕೈ ಜೋಡಿಸುವ
ನಾಡ ಕಟ್ಟುವ. ನಾವು ಹಾಡ ಹಾಡುವ
ವಂದೇ..............ಮಾತರಂ............

ಜಾತಿ ನೀತಿಗಳು ಉಸಿರಿಗಿಲ್ಲ.
ಮಾತೆ ಮಮತೆಗೆ ಕರಗದವರಿಲ್ಲ.
ಹಸಿರು ಉಸಿರನ್ನಿತ್ತ ಜನ್ಮದಾತೆಗೆ
ಮುಡಿಪಾಗಲಿ ಎಲ್ಲರೆಲ್ಲ.
ಭಾರತೀಯ ನೀ ಬದ್ಧನಾಗಿರು
ಭಾವದೀವಿಗೆ ಬೆಳಗಿಸುತ್ತಿರು
ಅರ್ಘ್ಯವಾಗಲೀ ನಿನ್ನ ಉಸಿರೂ
ಗಾನವಾಗಲೀ ತಾನವಾಗಲೀ
ಮೊಳಗಲೀ
ವಂದೇ...........ಮಾತರಂ..................

ನುಡಿಯ ನಮನವಿದು ಮಾತೃಭೂಮಿಗೆ
ಸುಜನ ವಂಧ್ಯೆಗೆ ರಾಷ್ಟ್ರಮಾತೆಗೆ
ಭರತ ಭೂಮಿಗೆ, ಜೀವದಾತೆಗೆ
ನುಡಿಯ ನಮನವಿದು ಜಗನ್ಮಾತೆಗೆ
ವಂದೇ...........ಮಾತರಂ.........

ವಿಷಯ ವಿಶಿಷ್ಟ



## ನಮ್ಮ ಮುಂದಿನ ಗುರಿಯೀಗ

# ಸಬ್‌ಮೆರಿನ್ ಅಭಿವೃದ್ಧಿ !

ಸ್ವದೇಶಿ ನಿರ್ಮಿತ ಜಲಾಂತರ್ಗಾಮಿ ಕ್ಷಿಪಣಿ ಕೆ–15 ರ ಉಡಾವಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಭಾರತ ನೀರೊಳಗಿಂದಲೇ ಅಣ್ವಸ್ತ್ರ ಉಡಾಯಿಸುವ ತಂತ್ರಜ್ಞಾನದಲ್ಲಿ ವಿಶ್ವದ ದೈತ್ಯ ರಾಷ್ಟ್ರಗಳಾದ ಅಮೆರಿಕ, ರಷ್ಯಾ ಫ್ರಾನ್ಸ್ ಹಾಗೂ ಚೀನಾದ ಸಾಲಿನಲ್ಲಿ ನಿಂತಿದೆ. 700 ಕಿ.ಮೀ. ದೂರಗಾಮಿ ಸಾಮರ್ಥ್ಯ ಹೊಂದಿರುವ ಈ ಕೆ–15 ಕ್ಷಿಪಣಿ 1 ಟನ್ ತೂಕದ ಅಣ್ವಸ್ತ್ರ ಹೊತ್ತೊಯ್ಯಬಲ್ಲದು. ನಮ್ಮ ಮುಂದಿನ ಗುರಿಯೀಗ ಸ್ವದೇಶಿ ಸಬ್‌ಮೆರಿನ್ ಅಭಿವೃದ್ಧಿಪಡಿಸುವುದು ಎನ್ನುತ್ತಿದ್ದಾರೆ ಡಿಆರ್‌ಡಿಒ ವಿಜ್ಞಾನಿಗಳು. ಅವರನ್ನು ಅಭಿನಂದಿಸೋಣ, ಅವರಿಗೆ ಶುಭ ಹಾರೈಸೋಣ.

ಅಮೇರಿಕನ್ನರಿಂದ ಕಲಿಯುವುದು ಬಹಳಷ್ಟಿದೆ. ಅಲ್ಲಿನ ರಸ್ತೆಗಳು, ಫ್ರೀವೇಗಳು, ನಗರದ ಪ್ಲಾನಿಂಗ್ ಸ್ವಚ್ಛತೆ! ಸಿಂಪ್ಲಿ ಸುಪರ್ಬ್. ಕೆಲವು ತಿಂಗಳು ಬಿಟ್ಟು ನಾನು ನೋಡಿದ್ದು ಲಾಸ್ ವೇಗಸ್ ಮತ್ತು ಗ್ರ್ಯಾಂಡ್ ಕಾನ್ಯನ್. ಲಾಸ್ ವೇಗಸ್ಸು ಜೂಜುಕೋರರ ಜಾಗ. ಮಲಗದ ನಗರ. ರಾತ್ರಿಯಲ್ಲೆ ಇಲ್ಲಿನ ಕಾರುಬಾರು. ಹೊಳೆಯುವ ಕಟ್ಟಡಗಳು, ರಸ್ತೆಗಳು, ಕ್ಯಸಿನೋಗಳು, ಕುಡಿದ ಜನ, ಜೂಜಿನಲ್ಲೆ ಎಚ್ಚರವಿರುವ ನಿಶಾಚರರು, ಡಾಲರಿನ ಝಣ ಝಣ 'ಹೋ' ಎನ್ನುವ ಗುಂಪು ಹತ್ತೂರಿನ ಜಾತ್ರೆಗೂ ಮೀರುವ ಹುರುಪು! ಗ್ರ್ಯಾಂಡ್ ಕಾನ್ಯನ್ ನೈಸರ್ಗಿಕ ಸುಂದರ ಜಾಗ. ಕೊಲೆರೆಡೊ ನದಿಯಿಂದ ಕೊರೆಯಲ್ಪಟ್ಟ ಕಾನ್ಯನ್. ಲಾಸ್ ಎಂಜಲೀಸ್ನ ಹಾಲಿವುಡ್ ಕೂಡ ಸುಂದರ ತಾಣ. ಕ್ಯಾಲಿಫೋರ್ನಿಯಾದ ಸುಮಾರಷ್ಟು ಸಮುದ್ರ ತೀರಗಳಲ್ಲಿನ ಶಾಂತ ಸಮುದ್ರ ನಿಜಕ್ಕೂ ಶಾಂತವಾಗಿದೆ. ಹಿಂದೂ ಮಹಾ ಸಾಗರದ ಅಬ್ಬರವಿಲ್ಲ. ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಸಾನ್ ಫ್ರಾನ್ಸಿಸ್ಕೋ, ಸಾನ್ ಹೋಸೆ, ಮೊಂಟೆರೆರೆಯ ರಮಣೀಯ ಜಾಗಗಳು, ಶಾಂತಸಾಗರವನ್ನು ಅಲ್ಲಿಯೂ ನೋಡಿದ್ದಾಯ್ತು. ಅಲ್ಲಿನ ಮಿಸ್ಟರಿ ಸ್ಪಾಟ್ ನೋಡಿದಾಗ ಹುಬ್ಬೇರಿಸಿ, ಅಬ್ಬ ಎಂದು ಬಂದ ನಾವು, ಕ್ರುಕೆಡೆಸ್ಟ್ ಸ್ಟ್ರೀಟ್‌ನ ನೋಡಿ ಅಯ್ಯಪ್ಪ ಎಂದು ಕಿರುಚಿದ್ದಿದೆ. ಜುಲೈ 2007 ರಲ್ಲಿ ಪೂರ್ವ ತೀರಕ್ಕೆ ಪ್ರಯಾಣ. ಸ್ನೇಹಿತೆಯ ಭೇಟಿ. ನಯಾಗರ! ಹೇಗೆ ಮರೆಯಲಿ ನಯಾಗರದ ಸೌಂದರ್ಯವನ್ನ! ಸೌಂದರ್ಯವೇ ನೀರಾಗಿ ಧುಮುಕ್ಕುತ್ತಿದೆ ಅಲ್ಲಿ. ಅಮೇರಿಕದಲ್ಲಿ ನಾನು ನೋಡಿದ ಅತ್ಯಂತ ಸುಂದರ ರಮಣೀಯ ತಾಣವೆಂದು ಯಾವ ಸಂಶಯವಿಲ್ಲದೆ ಹೇಳಬಲ್ಲೆ. ನಯಾಗರದ ನೆನಪು ಇನ್ನೂ ಹಸಿರಾಗಿದೆ; ಅಲ್ಲಿನ ಸ್ವಾತಂತ್ರ ದಿನದಂದು ಸಿಡಿದ ಪಟಾಕಿಯ ಬೆಳಕಿನಂತೆ. ಚಳಿಗಾಲದಲ್ಲಿ ಕೊರೆವ ಚಳಿ, ಹಾಗೆ ಬೇಸಿಗೆಯಲ್ಲಿ ಕೆಟ್ಟ ರಣಬಿಸಿಲು. ಎರಡೂ ಮಿತಿಮೀರಿದ್ದು, ನಮ್ಮ ಬಯಲು ಸೀಮೆಯನ್ನೂ ನಾಚಿಸುವ ಬಿಸಿಲಿದೆ ಕ್ಯಾಲಿಫೋರ್ನಿಯಾದಲ್ಲಿ. ಎ.ಸಿ ಯಿಲ್ಲದೆ ಒಂದು ನಿಮಿಷವೂ ಮನೆಯಲ್ಲಿ ಇರಲಾಗದು.

ನನ್ನ ಅಡುಗೆಯೂ ಬೇಸರ ಬಂದಂತಾಗಿ, ಅಮ್ಮನ ನೆನಪೂ ತೀವ್ರವಾಗಿ, ಕೆಲಸವೂ ಕಡಿಮೆಯಾಗಿ ನಾನು ಬರುವಾಗ 10 ತಿಂಗಳುಗಳು ಕಳೆದುಹೋಗಿದ್ದವು. ಅಮೇರಿಕ ಹಳೆಯ ಸ್ನೇಹಿತರನ್ನು ಭೇಟಿ ಮಾಡಿಸಿತು. ಹೊಸ ಸ್ನೇಹಕ್ಕೆ ನಾಂದಿಯಾಯ್ತು. ಹೊಸ ದೃಷ್ಟಿಕೋನವನ್ನು ಕೊಟ್ಟಿತು. ಎಲ್ಲವನ್ನು ಹೋಲಿಸಲಾಗುವುದಿಲ್ಲ. ಆ ಆ ದೇಶಕ್ಕೆ ಅದರದ್ದೆ ಆದ ಇತಿಹಾಸ, ಹಿನ್ನಲೆ, ಜನ, ಸಂಸ್ಕೃತಿ ಇದೆ. ಎಲ್ಲವನ್ನೂ ನಾವು ಗೌರವಿಸಬೇಕು ಎನ್ನುವುದನ್ನೂ ಹೇಳಿಕೊಟ್ಟಿತು. ಅಮೇರಿಕ ಪ್ರವಾಸ ಸದಾ ಹಸಿರಾಗಿರುವ ಪ್ರವಾಸ.

**– ಮನಸ್ವಿನಿ, ಬೆಂಗಳೂರು**



## ಆತನ ನೆನಪಿನಲ್ಲಿ ಮರಕ್ಕೂ ಹೆದರಿದ ಆಂಗ್ಲರು!!

**ಸ್ವಾತಂತ್ರ್ಯದ ದಿವ್ಯ ಸ್ಮೃತಿ**

'ಆಜಾದ್ ಹೀ ರಹೋಂಗಾ, ಆಜಾದ್ ಹೀ ಮರೂಂಗಾ' ಅದವನ ಶಪಥ. ಹಾಗೇ ಬದುಕಿದ ಕೂಡಾ. ಸ್ನೇಹಿತನೊಬ್ಬನ ಮೋಸದ ಫಲವಾಗಿ ಬ್ರಿಟಿಷರಿಗೆ ಸಿಕ್ಕು ಬೀಳುವಂತಾದಾಗ ತನ್ನ ಶಪಥದಂತೆ ತಾನೇ ತನಗೆ ಗುಂಡು ಹೊಡೆದುಕೊಂಡು ಸ್ವತಂತ್ರ ವಾಗಿಯೇ ಹುತಾತ್ಮನಾದ. "ಕ್ರಾಂತಿವೀರ ಚಂದ್ರಶೇಖರ ಆಜಾದ್" ಎಂಬ ಹೆಸರು ಕೇಳಿದರೇ ಸಾಕು, ಬ್ರಿಟಿಷರು ಥರ ಥರ ನಡುಗುತ್ತಿದ್ದರು. ಬ್ರಿಟಿಷರು ಆಲ್‌ಫ್ರೆಡ್ ಪಾರ್ಕಿನಲ್ಲಿ ಸುತ್ತುವರಿದಾಗ ಆಜಾದ್ ಏಕಾಂಗಿಯಾಗಿ ಅಭಿಮನ್ಯುವಿನಂತೆ ಗಂಟೆಗಟ್ಟಲೆ ಕಾಲ ಹೋರಾಡಿದ್ದ. ಆಜಾದ್ ಹೋರಾಟ ನಡೆಸಿದ ಆ ಪಾರ್ಕ್ ಯಾತ್ರಾಸ್ಥಳವಾಯಿತು. ಆತನ ಪರವಾಗಿ ಗುಂಡುಗಳನ್ನು ನುಂಗಿದ ಮರದ ಒಂದೊಂದು ಕಾಂಡವೂ ಪೂಜಾವಸ್ತುವಾಯ್ತು. ಮರುದಿನದಿಂದ ಆ ಪವಿತ್ರ ಮರದ ದರ್ಶನಕ್ಕಾಗಿ ಸಾವಿರಾರು ಮಂದಿ ಬರತೊಡಗಿದರು. ಮರವನ್ನು ಪೂಜಿಸತೊಡಗಿದರು. ಇದೇ ಮತ್ತೊಂದು ಹೋರಾಟಕ್ಕೆ ಕಾರಣವಾದೀತೆಂದು ಹೆದರಿದ ಬ್ರಿಟಿಷರು ರಾತ್ರೋರಾತ್ರಿ ಆ ಮರವನ್ನು ಕಡಿಸಿಹಾಕಿದರು!! ಆ ಧೀರೋದಾತ್ತ ವೀರನ ಕುರಿತು ನಮ್ಮ ಮಕ್ಕಳಿಗೆ ತಿಳಿಸಿದರೆ.... ಛೆ, ಬಿಡಿ, ಅವರು ಮುಂದೆ ದೇಶಭಕ್ತರಾದರೆ ಕಷ್ಟ.







# ಕಲಾತತ್ವ ಮಹರ್ಷಿ
# ಆನಂದ ಕುಮಾರಸ್ವಾಮಿ



"ಭಾರತೀಯತೆಗೆ ನಾವು ಸಲ್ಲಿಸುವ ಗೌರವವೇ ಭಾರತದ ಸ್ವಾತಂತ್ರ್ಯಕ್ಕಾಗಿ ನಮ್ಮಿಂದ ಸಂದಾಯವಾಗ ಬೇಕಾಗಿರುವ ದಿಟವಾದ ಕೊಡುಗೆ."

**ಭಾರತೀಯ ಕಲಾಕೃತಿಗಳನ್ನು ಕಂಡು ವಿದೇಶಿಯರು ಅನಾಗರಿಕವೆಂದು ಮೂದಲಿಸುತ್ತಿದ್ದ ಕಾಲದಲ್ಲಿ, ಜಗತ್ತಿನ ಉಳಿದೆಲ್ಲ ಕಲಾಪ್ರಕಾರಗಳಿಗಿಂತ ಭಾರತೀಯ ಕಲೆ ಮಿಗಿಲಾದುದೆಂದು ನಿರೂಪಿಸಿದವರು ಕಲಾತತ್ವ ಮಹರ್ಷಿ ಆನಂದ ಕುಮಾರಸ್ವಾಮಿ. ಬದುಕಿನ ಬಹುಭಾಗ ಭಾರತದಿಂದ ಹೊರಗೇ ಕಳೆದರೂ ಭಾರತೀಯ ಕಲೆ ಸಂಸ್ಕೃತಿಗಳ ಕುರಿತು ಪಶ್ಚಿಮ ದೇಶಗಳಲ್ಲಿ ಗೌರವವನ್ನೂ, ಅಭಿಮಾನವನ್ನೂ ಮೂಡಿಸಿದ ಕಲಾತಪಸ್ವಿ. ಸಂಸ್ಕೃತಿಯ ಮಹತ್ವವನ್ನು ಅರಿತುಕೊಳ್ಳದೆ ಅದರ ಕುರಿತು ಅಪಾರ್ಥ ಕಲ್ಪಿಸುತ್ತಿದ್ದ ವಿಶ್ವವಿದ್ಯಾನಿಲಯಗಳ ವಿದ್ವಾಂಸರು ಹಾಗೂ ಪಾಶ್ಚಿಮಾತ್ಯ ವಿಮರ್ಶಕರಿಗೆ ಸೆಡ್ಡು ಹೊಡೆದು ಧರ್ಮ ಹಾಗೂ ಸಂಸ್ಕೃತಿಗೆ ಹೊಸ ಭಾಷ್ಯ ಬರೆದು ಭಾರತೀಯ ಸಂಸ್ಕೃತಿಯ ಸತ್ವ ಹಾಗೂ ಮಹತ್ವಗಳನ್ನು ಜಗತ್ತಿಗೇ ಸಾರಿ ಹೇಳಿದ ಈ ಕಾಲದ ಋಷಿ. ಈ ಧೀಮಂತ ಮಹರ್ಷಿಯ ಜೀವನ ದರ್ಶನವನ್ನು ತೆರೆದಿಟ್ಟಿದ್ದಾರೆ 'ಅಭಿಜ್ಞಾನ' ಪ್ರಕಾಶನದ ಶ್ರೀ ಸೂರ್ಯಪ್ರಕಾಶ ಪಂಡಿತ್.**

"ರಾಷ್ಟ್ರವೊಂದರ ನಿರ್ಮಾಣವು ಕವಿ ಮತ್ತು ಕಲಾವಿದರಿಂದಲೇ ಹೊರತು ಉದ್ಯಮಿಗಳು ಅಥವಾ ರಾಜಕಾರಣಿಗಳಿಂದಲ್ಲ; ಬದುಕಿನ ಗಹನವಾದ ಮೌಲ್ಯಗಳು ಕಲೆಯಲ್ಲಿ ಮಾತ್ರವೇ ನಿಕ್ಷಿಪ್ತವಾಗಿರಬಲ್ಲವು."

ದಿಟವಾದ ಸ್ವದೇಶೀ ಎಂಬುದು ಜೀವನವನ್ನು ನೋಡುವ ಒಂದು ದೃಷ್ಟಿ. ಇದೊಂದು ಪ್ರಾಮಾಣಿ ಕತೆಯೂ ಹೌದು. ಮೊದಲು ಇದನ್ನು ತಿಳಿದು, ಜೀವನಕಲೆಯನ್ನು ಮತ್ತೊಮ್ಮೆ ಸಿದ್ದಿಸಿಕೊಳ್ಳಬೇಕಾಗಿದೆ.

"ಸ್ವದೇಶೀ ಎಂಬುದು ಒಂದು ರಾಜಕೀಯ ಅಸ್ತ್ರವಲ್ಲ; ಅದೊಂದು ಧಾರ್ಮಿಕ ಕಲಾದರ್ಶ."

"ಪ್ರತಿಯೊಬ್ಬ ಮಾನವನ ಕೊನೆಯ ಹಂತವೆಂದರೆ ದೈವಾನುಭವವೇ. ಆದುದರಿಂದ, ನಮ್ಮ ಎಲ್ಲ ಚಟುವಟಿಕೆಗಳೂ ಈ ಅಂತಿಮ ಗುರಿಯತ್ತಲೇ ಮುಖಮಾಡಿರತಕ್ಕದ್ದು."

"ಸಂಸ್ಕೃತಿ ಎಂಬುದು ಒಂದು ಮನೋಭಾವ; ಇದು ತನ್ನ ಪರಂಪರೆಯನ್ನು ಕುರಿತು ವ್ಯಕ್ತಿಯೊಬ್ಬನ ಪೂರ್ವಗ್ರಹಗಳಿಲ್ಲದ ಅರಿವು". "ಪರಂಪರೆಯ ಎಳೆಗಳನ್ನು ತುಂಡರಿಸಿಕೊಂಡ ಅಡ್ಡಜಾತಿಯ ತ್ರಿಶಂಕು ಮಾನಸಿಕತೆ ಮತ್ತು ತಾಯಿ ಬೇರಿನಿಂದ ಪೂರ್ಣವಾಗಿ ವಂಚಿತವಾದ ಟೊಳ್ಳು ಜನಾಂಗವನ್ನು – ಎಂದರೆ ಪೂರ್ವಕ್ಕಾಗಲೀ, ಪಶ್ಚಿಮಕ್ಕಾಗಲೀ, ಭೂತಕ್ಕಾಗಲೀ, ಭವಿಷ್ಯಕ್ಕಾಗಲೀ ಸೇರದ ಸಮಾಜಬಾಹಿರ ಬೌದ್ಧಿಕವರ್ಗವನ್ನು – ಸೃಷ್ಟಿಸಲು ಆಂಗ್ಲಶಿಕ್ಷಣವನ್ನು ಪಡೆದ ಒಂದೇ ಒಂದು ಪೀಳಿಗೆಯಷ್ಟೆ ಸಾಕು."

ಮಂತ್ರಸದೃಶವಾದ ಮೇಲಿನ ಮಾತುಗಳು ಆನಂದ ಕೆಂಟಿಷ್ ಕುಮಾರಸ್ವಾಮಿ ಅವರದ್ದು; ಇವರು ನಮ್ಮ ಕಾಲದ ಒಬ್ಬ ಋಷಿಯೆಂದೇ ಪರಿಗಣಿತರಾಗಿದ್ದಾರೆ.

ಖನಿಜಶಾಸ್ತ್ರ, ತತ್ವಶಾಸ್ತ್ರ, ಶಿಲ್ಪ, ಚಿತ್ರ, ಸಂಗೀತ, ಕರಕುಶಲತೆ – ಹೀಗೆ ಹಲವು ಹತ್ತು ವಿಷಯಗಳಲ್ಲಿ ಆರುನೂರಕ್ಕೂ ಹೆಚ್ಚು ಪ್ರೌಢಪ್ರಬಂಧಗಳನ್ನೂ, ಹತ್ತಾರು ಉದ್ಗ್ರಂಥಗಳನ್ನೂ ರಚಿಸಿ ಇಡಿಯ ಜಗತ್ತಿನ ಪ್ರತಿಭಾವಂತರ, ಚಿಂತಕರ, ಕಲಾ ಯೋಗಿಗಳ ಸಾಲಿನಲ್ಲಿ ಅಲಂಕೃತರಾಗಿ ರುವವರು ಆನಂದ ಕುಮಾರಸ್ವಾಮಿ. ಜಗತ್ತಿನ ಬೇರೆ ಬೇರೆ ಪ್ರಾಂತಗಳ ಇಪ್ಪತ್ತಕ್ಕೂ ಹೆಚ್ಚು ಭಾಷೆಗಳು ಇವರಿಗೆ ವಶವಾಗಿದ್ದುವು. ಇವರ ಬರಹದ ಒಂದೊಂದು ವಾಕ್ಯವೂ ಮಹಾಗ್ರಂಥ ವೊಂದರ ಸತ್ತ್ವವನ್ನೇ ಅಡಗಿಸಿಕೊಂಡಿದೆ, ಅರಗಿಸಿಕೊಂಡಿದೆ ಎಂದು ವಿದ್ವಾಂಸರು ಪ್ರಶಂಸಿಸಿದ್ದಾರೆ. ಬದುಕಿನ ಎಡರು–ತೊಡರುಗಳಿಗೆ ಬಗ್ಗದೆ, ಕುಗ್ಗದೆ ತಾವು ನಂಬಿದ್ದ ಮಹಾತ್ತ್ವವೊಂದರ ಅನುಸಂಧಾನದಲ್ಲಿಯೇ ತಮ್ಮ ಬಾಳನ್ನು ಬೆಳಗಿಸಿದ ತಪಸ್ವಿ ಇವರು. ಭಾರತೀಯ ಕಲಾಮೌಲ್ಯಗಳನ್ನು ಎತ್ತಿಹಿಡಿದು ಜಗತ್ತಿಗೆ ಅವುಗಳನ್ನು ಪರಿಚಯಿಸಿದ ಸಾಂಸ್ಕೃತಿಕ ರಾಯಭಾರಿ; ವಿಶ್ವದ

ಎಲ್ಲ ಮಹಾಮೌಲ್ಯಗಳೂ ಒಂದೇ ಸತ್ತ್ವದ ಅಭಿವ್ಯಕ್ತಿಯೆಂದು ಸಾರಿದ ದಾರ್ಶನಿಕ ಆನಂದ ಕುಮಾರಸ್ವಾಮಿ.

ಆನಂದ ಕುಮಾರಸ್ವಾಮಿ ಹುಟ್ಟಿದ್ದು 1877ರ ಆಗಸ್ಟ್ 22ರಂದು, ಕೊಲೊಂಬೋ ನಗರದಲ್ಲಿ (ಈಗಿನ ಶ್ರೀಲಂಕಾ). ತಂದೆ ಸರ್ ಮುತ್ತು ಕುಮಾರಸ್ವಾಮಿ; ತಾಯಿ ಎಲಿಜಬೆತ್ ಕ್ಲೇ ಬೀಬಿ. ಮುತ್ತು ಕುಮಾರಸ್ವಾಮಿಯವರ ಪೂರ್ವಜರು ತಮಿಳುನಾಡಿನ ಮೂಲದವರು; ಎಲಿಜಬೆತ್ ಕ್ಲೇ ಇಂಗ್ಲೆಂಡ್ ದೇಶದವರು.

ಮುತ್ತು ಕುಮಾರಸ್ವಾಮಿ ವಿದ್ವಾಂಸರು; ಬ್ರಿಟಿಷ್ ಆಡಳಿತದಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದವರು. ಬ್ರಿಟಿಷ್ ರಾಣಿ ಇವರಿಗೆ 'ನೈಟ್ ಹುಡ್' ಪದವಿಯನ್ನು ನೀಡಿ ಗೌರವಿಸಿದ್ದಳು. ಆನಂದ ಕುಮಾರಸ್ವಾಮಿ ಎರಡು ವರ್ಷದ ಹಸುಳೆಯಾಗಿದ್ದಾಗಲೇ ಇವರು ತೀರಿಕೊಂಡರು. ಹೀಗಾಗಿ ಆನಂದ ಕುಮಾರಸ್ವಾಮಿ ತಾಯಿ ಯೊಂದಿಗೆ ಇಂಗ್ಲೆಂಡ್ ಸೇರಿದರು.

ಆನಂದ ಕುಮಾರಸ್ವಾಮಿಯವರ ವಿದ್ಯಾಭ್ಯಾಸವೆಲ್ಲ ಇಂಗ್ಲೆಂಡಿನಲ್ಲೇ ನಡೆಯಿತು. ಭೂ ವಿಜ್ಞಾನ, ಸಸ್ಯಶಾಸ್ತ್ರಗಳೊಂದಿಗೆ ಬಿ.ಎಸ್‌ಸಿ ಪದವಿಯನ್ನು ಲಂಡನ್ನಿನ ಯೂನಿವರ್ಸಿಟಿ ಕಾಲೇಜ್‌ನಿಂದ 1900 ರಲ್ಲಿ ಪಡೆದರು. ಸಿಂಹಳದ್ವೀಪದ ಭೂಸಂಪತ್ತನ್ನು ಕುರಿತು ಹಲವಾರು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದ ಕುಮಾರಸ್ವಾಮಿಯವರ ಪ್ರತಿಭೆಯನ್ನು ಮೆಚ್ಚಿಕೊಂಡು 1903 ರಲ್ಲಿ ಬ್ರಿಟಿಷ್ ಸರ್ಕಾರ 'ಮಿನರಲಾಜಿಕಲ್ ಸರ್ವೆ ಆಫ್ ಸಿಲೋನ್'ನ ನಿರ್ದೇಶಕರನ್ನಾಗಿ ನೇಮಿಸಿತು. 'ತೋರಿಯನೈಟ್' ಎಂಬ ಹೊಸ ಖನಿಜವೊಂದನ್ನು ಇವರು 1904 ರಲ್ಲಿ ಕಂಡು ಹಿಡಿದರು. ಇವರು ಖನಿಜಶಾಸ್ತ್ರದ ಬಗ್ಗೆ ಪ್ರಕಟಿಸಿದ್ದ ಪ್ರಬಂಧಗಳಿಗೆ ಲಂಡನ್ ವಿಶ್ವವಿದ್ಯಾಲಯವು 1906 ರಲ್ಲಿ ಡಾಕ್ಟೊರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಪರಕೀಯ – ಸಂಸ್ಕೃತಿಗಳು ಸ್ಥಳೀಯ – ಸಂಸ್ಕೃತಿಗಳ ಮೇಲೆ ಎರಗಿ, ಆ ಮೂಲಸಂಸ್ಕೃತಿಗಳ ವಿವರಗಳನ್ನೆಲ್ಲ ಬುಡಮೇಲು ಮಾಡಿರುವುದನ್ನು ಕುಮಾರಸ್ವಾಮಿಯವರು ತಾವು ಸಿಂಹಳದಲ್ಲಿದ್ದಾಗ ನೇರವಾಗಿ ಕಂಡು ಕೊಂಡರು. ಜನಮಾನಸದಲ್ಲಿ ಮತ್ತೆ ತಮ್ಮ ಪರಂಪರೆ – ಸಂಪ್ರದಾಯ – ಸಂಸ್ಕೃತಿಗಳ ಬಗ್ಗೆ ಅರಿವು ಮೂಡಿಸಿ, ಅಭಿಮಾನ ತಳೆಯುವಂತೆ ಮಾಡಬೇಕಾದುದರ ಅವಶ್ಯಕತೆಯನ್ನು ಮನಗಂಡರು. ಭಾರತೀಯ ದರ್ಶನ, ಕಲೆ, ಧರ್ಮ, ಸಂಸ್ಕೃತಿಗಳಿಗೆ ಸೇರಿದ ಗ್ರಂಥಗಳ ಅಧ್ಯಯನದಲ್ಲಿ ತಲ್ಲೀನರಾದರು. ಭಾರತದೇಶವನ್ನೆಲ್ಲ ಸುತ್ತಾಡಿ ಭಾರತೀಯ ಸಂಸ್ಕೃತಿಯ ನೇರವಾದ ಪರಿಚಯವನ್ನು ಮಾಡಿಕೊಂಡರು. ಈ ಓಡಾಟದಲ್ಲಿ ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ, ಅರವಿಂದ್ ಘೋಷ್, ವಿಪಿನ ಚಂದ್ರಪಾಲ್, ಸುರೇಂದ್ರನಾಥ ವಂದೋಪಾಧ್ಯಾಯ, ಅವನೀಂದ್ರನಾಥ ಠಾಕೂರ್, ನಂದಲಾಲ ಬಸು, ಅಶೀತಕುಮಾರ ಹಲಧರ್, ರವೀಂದ್ರನಾಥ ಠಾಕೂರ್, ಅರ್ಧೇಂದುಕುಮಾರ ಗಂಗೂಲಿ ಮೊದಲಾದ ಖ್ಯಾತನಾಮರ ಸ್ನೇಹ ಒದಗಿತು. ಸಿಂಹಳ ದ್ವೀಪದ ಕರಕುಶಲಕಲೆಗಳ ಬಗ್ಗೆ ತಾವು ಸಂಗ್ರಹಿಸಿದ್ದ ಮಾಹಿತಿಯನ್ನೆಲ್ಲ ಕೊಡಿಸಿ 'Mediaeval Sinhalese Art' ಎಂಬ ಉದ್ಗ್ರಂಥವನ್ನು ಪ್ರಕಟಿಸಿದರು (1908 ರಲ್ಲಿ). ಇದೇ ವರ್ಷ ಕುಮಾರಸ್ವಾಮಿಯವರು ಪ್ರಕಟಿಸಿದ 'The Aim of India Art' ('ಭಾರತೀಯ ಕಲೆಯ ಗೊತ್ತುಗುರಿ') ಎಂಬ ಪ್ರಬಂಧವು ಭಾರತೀಯ ಕಲಾಪರಂಪರೆ ಯನ್ನು ಕುರಿತು ಜಗತ್ತಿನ ಕಲಾವಿದರ ಕಣ್ಣನ್ನು ವಿಶಾಲಗೊಳಿಸಿತು.

ಆನಂದ ಕುಮಾರಸ್ವಾಮಿಯವರ ಆಸಕ್ತಿ ಈಗ ಪೂರ್ಣವಾಗಿ ಭೂ ವಿಜ್ಞಾನದಿಂದ ಕಲೆ, ಸಂಸ್ಕೃತಿಗಳ ಕಡೆಗೆ ತಿರುಗಿತು. ಇಂಗ್ಲೆಂಡಿನಲ್ಲೇ ಇದ್ದುಕೊಂಡು ಹಲವಾರು ಬಾರಿ ಭಾರತಕ್ಕೆ ಬಂದು ಸುತ್ತಾಡಿದರು. ಆಗ ಇಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮಕ್ಕೂ ಕುಮಾರಸ್ವಾಮಿಯವರು ಯೋಗದಾನ ನೀಡಿದರು. ಭಾರತವು ರಾಜಕೀಯವಾಗಿ ಮಾತ್ರವಷ್ಟೆ ಸ್ವಾತಂತ್ರ್ಯ ಪಡೆಯುವುದು ಮುಖ್ಯವಲ್ಲ; ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿಯೂ ಸ್ವತಂತ್ರವಾಗಬೇಕೆನ್ನುವುದು ಅವರ ಚಿಂತನೆ. ಜನರಲ್ಲಿ ಸ್ವದೇಶೀ ತತ್ತ್ವವು ರಕ್ತಗತವಾಗಬೇಕಾದರೆ ಈ ನೆಲದ ಧರ್ಮ, ಕಲೆ, ಆಚಾರ – ವಿಚಾರಗಳನ್ನು ಮೈಗೂಡಿಸಿಕೊಳ್ಳುವುದು ಅನಿವಾರ್ಯವೆಂದರು. ಸ್ವದೇಶೀ ಕಲ್ಪನೆಗೂ ಆಧ್ಯಾತ್ಮಿಕತೆಗೂ ಅವಿನಾಭಾವ ಸಂಬಂಧ ಇದೆಯೆಂಬುದು ಅವರ ತತ್ತ್ವ.

ಕುಮಾರಸ್ವಾಮಿಯವರು ಭಾರತದ ಉದ್ದಗಲಕ್ಕೂ ಸಂಚರಿಸಿ ನೂರಾರು ಚಿತ್ರಗಳು, ಪ್ರತಿಮೆಗಳು, ಶಿಲ್ಪಗಳು, ಕಲೋಪಕರಣಗಳನ್ನು ಸಂಗ್ರಹಿಸಿದ್ದರು.





# ಅಮೆರಿಕ ಪ್ರವಾಸ : ಒಂದು ಅನುಭವ ಕಥನ

**ತಮ್ಮ ಅಮೆರಿಕ ಪ್ರವಾಸದ ನೆನಪುಗಳನ್ನು ಬಿಚ್ಚಿಟ್ಟಿದ್ದಾರೆ ಮನಸ್ವಿನಿ.**

ಅಮೇರಿಕಾ!! ಮೊದಲ ಬಾರಿ ಅಮೇರಿಕ ದೇಶಕ್ಕೆ ಪಯಣ! ರೋಮಾಂಚನ ಅನ್ನಿಸುತ್ತೆ ಅಲ್ವಾ?. 2006 ರ ನವೆಂಬರಿನಲ್ಲಿ ಮೊದಲ ಸಲ ಅಮೇರಿಕೆಗೆ ಹೋಗುವ ಸುಯೋಗ ಬಂದಿತ್ತು. ರೋಮಾಂಚನವೇನೋ ಆಗಿತ್ತು. ಅದರ ಜೊತೆಜೊತೆಗೆ ಮನೆಯವರನ್ನೆಲ್ಲ ಬಿಟ್ಟು ತಿಂಗಳುಗಟ್ಟಲೆ, ತಪ್ಪಿದ್ರೆ ವರ್ಷಗಟ್ಟಲೆ ಇರಬೇಕಲ್ಲ ಎಂಬ ಚಿಂತೆ. ಈ ಎರಡೂ ಮಿಶ್ರಭಾವಗಳ ಜೊತೆ, ಕನಸುಗಳನ್ನೆಲ್ಲ 64 ಕೆ.ಜಿ ಸೂಟ್‌ಕೇಸಿನಲ್ಲಿ ತುಂಬಿ, ಅದರ ಜೊತೆ ಏರ್‌ಪೋರ್ಟಿನಲ್ಲಿ ಅಮ್ಮ, ಅಪ್ಪ, ತಂಗಿ ಸ್ನೇಹಿತರಿಗೆಲ್ಲ ಶುಭವಿದಾಯ ಹೇಳುವಾಗ, ಅಮ್ಮ ತಡೆದು ನಿಲ್ಲಿಸಿದ್ದ ಕಣ್ಣೀರು ಅದರ ಜೊತೆಗಿನ ಮಮತೆ ಎಲ್ಲವನ್ನು ತುಂಬಿಕೊಂಡು ವಿಮಾನ ಹತ್ತಿದ್ದಾಯ್ತು.

ಮೊದಲಿಗೆ ಸಿಂಗಾಪೂರಿಗೆ ಬಂದು ಅಲ್ಲಿಂದ ಕ್ಯಾಥೆ ಪೆಸಿಫಿಕ್ ವಿಮಾನವನ್ನು ಹತ್ತುವುದಿತ್ತು. ಸಿಂಗಾಪೂರಿನ ವಿಮಾನ ನಿಲ್ದಾಣವನ್ನು ನೋಡಿದ ಮನಸ್ಸು ಬೇಕೋ ಬೇಡವೋ ಬೆಂಗಳೂರಿನ ನಿಲ್ದಾಣಕ್ಕೊಮ್ಮೆ ಹೋಲಿಸಿ ಪ್ಚ್ ಪ್ಚ್ ಅಂದುಕೊಂಡು ಮುಂದೆ ಹೋಯಿತು. ಅಲ್ಲಿಂದ ಹಾಂಕಾಂಗ್ ಮುಂದಕ್ಕೆ ಲಾಸ್ ಎಂಜಲೀಸ್. ಮನಸ್ಸಿಗೂ, ದೇಹಕ್ಕೂ ತುಂಬಾ ಸುಸ್ತಾಗಿತ್ತು. ಇಮ್ಮಿಗ್ರೇಷನ್ ಅಲ್ಲಿ ಎಲ್ಲವೂ ಸುಗಮವಾಗಿ ಆಯಿತು. ಅಲ್ಲಿಂದ ಲಗೇಜು ತಳ್ಳಿಕೊಂಡು, ಲಾಸ್ ಎಂಜಲೀಸ್ ವಿಮಾನ ನಿಲ್ದಾಣದ ಹೊರಗೆ ಬಂದು ಟ್ಯಾಕ್ಸಿ ಹಿಡಿಯಲು ಬಂದ ನನಗೆ 'ಓಹ್ ! ಅಮೇರಿಕಾ ಕ್ಲೀನ್ ಆಗಿದೆ' ಅಂದ ಮನಸ್ಸಿಗೊಂದು ಬೈದು, 'ಹೋಲಿಕೆ ಶುರುವಾಯ್ತಾ?' ಎಂದು ಗದರಿಸಿ ನಾನಿರುವ ಜಾಗಕ್ಕೆ ಕರೆದುಕೊಂಡು ಹೋಗಿದ್ದಾಯ್ತು. ಮೊದಲೆರಡು ದಿನ 'ಜೆಟ್ ಲ್ಯಾಗಿನ' ಕಾಟ. ಬೇಡದ ಹೊತ್ತಿಗೆ ನಿದ್ದೆ. ಅದರಲ್ಲೂ ಕ್ಲೈಂಟ್ ಜಾಗದಲ್ಲಿ. ನಂತರ ಶುರುವಾದ್ದು ಅಲ್ಲಿಯ ಚಳಿ. ಪಶ್ಚಿಮ ತೀರದಲ್ಲಿ ಅಷ್ಟೇನೂ ಚಳಿ ಇಲ್ಲ ಅನ್ನೋದು ಸತ್ಯವಾದ್ರೂ ನಂಗೆ ಸ್ವಲ್ಪ ದಿನ ಸುಧಾರಿಸುವುದು ಸುಲಭವಾಗಿರ್ಲಿಲ್ಲ. ಅಲ್ಲಿಯ ಅಪಾರ್ಟ್‌ಮೆಂಟ್ ಎಲ್ಲ ಸುಸಜ್ಜಿತವಾಗಿತ್ತು. ಕಂಡ ಕಂಡವರಿಗೆಲ್ಲ ಹಾಯ್ ಅನ್ನೋ ಸ್ವಭಾವ ಇಲ್ಲಿಯ ಜನತೆಯದು. ಮೊದಮೊದಲು ಕಸಿವಿಸಿಯಾಯ್ತು. ನಂತರ ಅದೇ ಅಭ್ಯಾಸವಾಯ್ತು. ಸಂಜೆ 5ರ ಹೊತ್ತಿಗೆ ಕತ್ತಲು. ಜೊತೆಗೆ ಆಫೀಸಿನಲ್ಲಿ ತುಂಬಾ ಹೊತ್ತಿನ ಕೆಲಸವೂ ಇರ್ಲಿಲ್ಲ. ಚಳಿಗಾಲವಾದ್ರಿಂದ ವಾಕಿಂಗ್ ಅನ್ನೋ ಪದ ಬಾಯಿಂದ ಕೂಡ ಬರ್ತಿರ್ಲಿಲ್ಲ. ಆಫೀಸು, ಅಡುಗೆ, ಊಟ, ನೆಟ್, ಫೋನ್, ಊಟ, ಪುಸ್ತಕ ಇದಿಷ್ಟೇ ಇಲ್ಲಿಯ ಜೀವನವೇನೋ ಅನ್ನುವಂತಾಗಿತ್ತು. ಅಮೇರಿಕೆಯಲ್ಲಿ ಭಾರತೀಯರ ಸಂಖ್ಯೆ ಕಡಿಮೆಯೇನಿಲ್ಲ. ಹಾಗೆ ಭಾರತೀಯ ಅಂಗಡಿಗಳು, ಹೋಟೆಲ್ಲುಗಳು ಕೂಡ.

ಎಲ್ಲವನ್ನು 45ರಿಂದ ಗುಣಿಸುವ ನಮ್ಮವರ ಗುಣಕ್ಕೆ ನಾನೇನು ಹೊರತಾಗಿರಲಿಲ್ಲ. ತಿಂಗಳುಗಳ ನಂತರ ಅದು ಮೂರ್ಖತನವೆಂದು ನನಗೆ ನಾನೆ ಸಮಜಾಯಿಶಿ ಕೊಟ್ಟುಕೊಂಡೆ. ಎಲ್ಲವನ್ನು ರೂಪಾಯಿಯಲ್ಲಿ ಅಳೆಯುವ ಜಾಯಮಾನದಿಂದ ಹೊರಬರಲು ಪ್ರಯತ್ನ ಪಟ್ಟು ಅಂತೂ ಹೊರಬಂದೆ.

ಅಂತೂ ಡಿಸ್ನಿಲಾಂಡ್ ನೋಡುವ ಮೂಲಕ ನನ್ನ ನಿಜವಾದ ಅಮೇರಿಕ ಯಾತ್ರೆ ಶುರುವಾಯ್ತು. 'ಡಿಸ್ನಿಲ್ಯಾಂಡ್' ಒಂದು ಮಾಯಲೋಕವೇ ಸರಿ. ಚಿಣ್ಣರ ಮೆಚ್ಚಿನ ಲೋಕ. ವಾಲ್ಟ್ ಡಿಸ್ನಿಯ ಕ್ಯಾರಕ್ಟರ್‌ಗಳನ್ನು ನೋಡಿ, ಅಲ್ಲಿನ ವಿಶೇಷ ಪರೇಡ್ ನೋಡಿ ಮನಸ್ಸಿಗೆ ಸಂತೋಷವಾಗಿತ್ತು. ಅದಕ್ಕೂ ಮಿಗಿಲಾಗಿ ನನ್ನ ಆಪ್ತ ಸ್ನೇಹಿತೆಯ ಭೇಟಿ, ಅದೂ ವರ್ಷಗಳ ಬಳಿಕ. ಡಿಸ್ನಿಯ ಶಿಸ್ತು, ಪ್ಲಾನಿಂಗ್, ಬಣ್ಣಗಳು! ಅದೊಂದು ಅಮೂರ್ತ ಅನುಭವ. ಅಮೇರಿಕನ್ನರ ಮಾರ್ಕೆಟಿಂಗ್ ಸ್ಟ್ರಾಟಜಿ, ತುಂಬಾ ಚೆನ್ನಾಗಿದೆ. ಭಾರತ ಬಹುಶಃ ಇಲ್ಲಿ ಹಿಂದೆ ಉಳಿದಿದೆ. ನಿಜವೆಂದರೆ, ಭಾರತದ ನೈಸರ್ಗಿಕ ಸೌಂದರ್ಯ ಅಮೇರಿಕೆಗೆ ಇಲ್ಲ. ಆದರೆ ಪ್ರವಾಸಿ ತಾಣಗಳಲ್ಲಿನ ವ್ಯವಸ್ಥೆ ಅಮೇರಿಕವನ್ನು ರೇಸಿನಲ್ಲಿ ಮುಂದಿರಿಸಿವೆ. ಎರಡು ವಿಭಿನ್ನ ರಾಷ್ಟ್ರಗಳೇನೋ ಸರಿ; ಭಾರತಕ್ಕಿರುವ ಐತಿಹಾಸಿಕ ಶ್ರೀಮಂತಿಕೆ ಅಮೇರಿಕಕ್ಕಿಲ್ಲ ಒಪ್ಪಬಹುದು. ಆದರೂ ಭಾರತೀಯರಾದ ನಾವು

ದನ ಕಾಯೋದು ಅಂದಾಗ ನನಗೆ ನೆನಪಾಗ್ತಾಯಿದ್ದಿದ್ದು ಮಂಜು. ಆತನ ಕೆಲಸ ದನ ಕಾಯೋದಾಗಿತ್ತು.

ಹಾಗಂತ ಅದು ಅವನ ವೃತ್ತಿಯಾಗಿರಲಿಲ್ಲ. ದೇಹದಲ್ಲಿ ಶಕ್ತಿಯಿರೋ ತನಕ ಆತ ಕೂಲಿ ಕೆಲಸ ಮಾಡ್ತಿದ್ದ. ವಯಸ್ಸಾದ ಹಾಗೆ ಅವನಿಗೆ ಕೂಲಿ ಮಾಡೋಕೆ ಆಗ್ತಾಯಿರಲಿಲ್ಲ. ಮಂಜುಗೆ ಮಕ್ಕಳಿರಲಿಲ್ಲ. ಇದ್ದ ಚೂರು ಗದ್ದೆಯಿಂದ ಅವನಿಗೆ ಸಂಸಾರ ನಡೆಸಲು ಕಷ್ಟವಾದ ಕಾರಣ ಆತ ದನ ಕಾಯೋ ಕೆಲಸ ಮಾಡ್ತಾಯಿದ್ದ. ಆಗ ನಮ್ಮೂರಲ್ಲಿ ಇದ್ದ 12 ಮನೆಯಲ್ಲಿ 8 ರಿಂದ 10 ಮನೆಯವರು ದನ / ಎಮ್ಮೆ ಸಾಕಿದ್ದರು. ಬೆಳಗ್ಗೆ ಯಾರಾದ್ರೂ ಜೋರಾಗಿ ಕೂಗಿದ್ರೆ ಅದು ಮಂಜುದೇ ಅಂತ ಗೊತ್ತಾಗ್ತಾಯಿತ್ತು. ಬೆಳಗ್ಗೆ ಬೇಗ ತಿಂಡಿ ತಿಂದು ಮಂಜಿ ಕೊಟ್ಟ ಬುತ್ತಿಯನ್ನು ತಗೊಂಡು ಎಲ್ಲರ ಮನೆ ಹತ್ತಿರ ಜೋರಾಗಿ ಕೂಗಿ, ಬಿಟ್ಟ ದನಗಳನ್ನು ಹತ್ತಿರ ಇದ್ದ ಗುಡ್ಡಕ್ಕೆ ಹೊಡೆದುಕೊಂಡು ಹೋದರೆ ಮಂಜು ವಾಪಾಸಾಗ್ತಾಯಿದ್ದಿದ್ದು ಸಂಜೆ ಸೂರ್ಯ ಮುಳುಗೋ ಹೊತ್ತಲ್ಲಿ. ಅಲ್ಲಿಯತನಕ ಅದೇ ಅವನ ಪ್ರಪಂಚ. ಅವನು ಹೇಗೆ ಕಾಲ ಕಳಿತಾನೆ.? ಅವನಿಗೆ ಒಂಟಿತನ ಕಾಡೊಲ್ವೆ, ಕಾಡಲ್ಲಿ ಭಯ ಆಗೊಲ್ವೆ, ಅವರ ಜೀವನದ ಗುರಿಯೇನು, ಕಾಡು ಪ್ರಾಣಿ ಬಂದ್ರೆ ಏನು ಮಾಡ್ತಾನೆ ಅಂತೆಲ್ಲಾ ನನ್ನ ಮನಸ್ಸಲ್ಲಿ ಪ್ರಶ್ನೆ ಏಳ್ತಾಯಿತ್ತು. ಅಲ್ಲಿ ಅವನು ಏನ್ ಮಾಡ್ತಾನೆ ಅಂತ ಕೆಲವೊಮ್ಮೆ ಅಮ್ಮನ ಹತ್ತಿರ ಕೇಳಿದ್ದೆ. ದನ ಕಾಯ್ತಾನೆ ಅಂದಿದ್ಲು.

ಮುಂದೆ ಹಳ್ಳಿಯಲ್ಲಿದ್ದರೆ ಉತ್ತಮ ವಿದ್ಯಾಭ್ಯಾಸ ಸಿಗದೆಂಬ ಕಾರಣಕ್ಕೆ ಬೆಂಗಳೂರಿಗೆ ಬಂದಿದ್ದೆ. ಇಲ್ಲಿ ಬಂದು ಓದಿ, ಕೆಲಸಕ್ಕೆ ಸೇರಿಯೂ ಆಯ್ತು. ಸಣ್ಣಕ್ಕಿದ್ದಾಗ ಶಾಲೆಯಲ್ಲಿ ನಿಮ್ಮ ಗುರಿಯೇನು ಅಂತ ಕೇಳಿದ್ರು. ನಾನು ಏನೂ ಹೇಳಿರಲಿಲ್ಲ. ಮನೆಗೆ ಹೋದಮೇಲೆ ಮಂಜು ಹತ್ರ ಒಮ್ಮೆ ಕೇಳಿದ್ದೆ. ನಿನ್ನ ಗುರಿಯೇನು ಅಂತ ಅದಕ್ಕೆ ಆತ "ಶಕ್ತಿಯಿರೋ ಅಷ್ಟು ದಿನ ಕೆಲಸ ಮಾಡ್ತೀನಿ ಆಮೇಲೆ ದೇವ್ರು ನೋಡ್ಕೋತಾನೆ" ಅಂದಿದ್ದ. ಮುಂದೆ ಮಂಜಿನ ಯಾರು ನೋಡ್ಕೋತಾರೆ ಅಂದಾಗ ಅಕ್ಕಪಕ್ಕದ ಮನೆಯವ್ರು ನೋಡ್ಕೋತಾರೆ ಅಂದಿದ್ದ. ಇಂಟರ್ವ್ಯೂಗೆ ಹೋದಾಗ ಎಲ್ಲರ ನಿಮ್ಮ ಮುಂದಿನ ಗುರಿಯೇನು ಅಂತ ಕೇಳ್ತಾರೆ. ಎಲ್ಲ ನಾನು ಅದಾಗಬೇಕು, ಇದಾಗಬೇಕು ಅಂತ ಹೇಳ್ತಾರೆ. ನೂರರಲ್ಲಿ 90 ಜನಕ್ಕೆ ತಾವೇನಾಗಬೇಕು ಎಂಬುದು ಗೊತ್ತೇಯಿರಲ್ಲ. ಕೆಲಸದ ಬಗ್ಗೆ ಯೋಚಿಸ್ತಾರೆ ಹೊರತು ಯಾರೂ ಜೀವನದ ಬಗ್ಗೆ ಯೋಚಿಸಲ್ಲ. ಜೀವನ ಅಂದ್ರೆ ಏನು ಅನ್ನುವ ಹೊತ್ತಿಗೆ ಗಂಟು ಮೂಟೆ ಕಟ್ಟೋಕೆ ತಯಾರಾಗಿರ್ತಾರೆ. ನನ್ನ ಕೇಳಿದಾಗ ನಾನು ಸುಮ್ಮನೆ ನಕ್ಕಿದ್ದೆ. ಆಗ ಮಂಜು ನೆನಪಾಗಿದ್ದ.

ಕೆಲಸದ ಒತ್ತಡದ ನಡುವೆ ಮಂಜು ಕಳೆದು ಹೋಗಿದ್ದ. ಎಷ್ಟು ದುಡಿದರೂ ಅದಕ್ಕೆ ತಕ್ಕ ಹಾಗೆ ಏರೋ ನಮ್ಮ ಖರ್ಚು. ಬಂದ ಸಂಬಳವನ್ನು ಮೂರೇ ದಿನದಲ್ಲಿ ಮುಕ್ಕಿ ಮತ್ತೆ ಯಾವಾಗ ಸಂಬಳ ಬರತ್ತೋ ಎಂದು ಕಾಯೋದು, ಈ ಕೆಲಸ, ಈ-ಡೆಡ್ ಲೈನು, ಯಾಂತ್ರಿಕ ಜೀವನದಿಂದ ಮನಸ್ಸು ಬೇಸತ್ತಿತ್ತು. ಆಗ ಮತ್ತೆ ನೆನಪಾಗಿದ್ದು ಮಂಜು. ಒಮ್ಮೆ ಊರಿಗೆ ಹೋಗಿ ಬರೋಣ ಅಂತ ಹೋಗಿದ್ದೆ. ಆಗ ಅಮ್ಮನ ಕೇಳಿದ್ದೆ. ಮಂಜು ಹೇಗಿದಾನೆ ಅಂತ. ಅವನು ಸತ್ತು ಎಷ್ಟೋ ವರ್ಷವಾಯ್ತು ಅಂದ್ಲು. ಮಂಜಿ ಹೇಗಿದಾಳೆ ಅಂದೆ. ಮಂಜು ಹೋದ ಕೆಲವೇ ದಿನಗಳಲ್ಲಿ ಅವಳೂ



ಅವನ ಹಾದಿ ಹಿಡಿದ್ಲು ಅಂತ ಹೇಳಿದ್ಲು.

ಅನಾದಿಕಾಲದಿಂದ ಜೀವನದ ಅವಿಭಾಜ್ಯ ಅಂಗವಾದ ಕೊಟ್ಟಿಗೆ ಎಷ್ಟೋ ಮನೆಯಲ್ಲಿ ಎತ್ತಂಗಡಿಯಾಗಿತ್ತು. ಮಂಜು ಹೋದ ಮೇಲೆ ದನ ಕಾಯೋ ಕೆಲಸನೂ ಇರಲಿಲ್ಲ. ಬಹುಶಃ ಮಂಜು ಅಥವಾ ದನ ಕಾಯೋರು ಇದ್ದಿದ್ರೆ ಅವಕ್ಕೆ ಕಾಡಲ್ಲಿ ಹೋಗಿ ತಮಗಿಷ್ಟವಾದುದನ್ನು ತಿನ್ನುವ ಹಕ್ಕು ಇರ್ತಿತ್ತು. ತಮಗಿಷ್ಟವಾದವರ ಜೊತೆ ಸೇರುವ ಅವಕಾಶವಿರ್ತಿತ್ತು. ಕೃತಕ ಗರ್ಭಧಾರಣೆ ಕಡಿಮೆಯಾಗ್ತಿತ್ತು. ಮನೆಯಲ್ಲಿ ಕೂರಲಾಗದೆ ಮಂಜುವಿನ ಮನೆಯ ಹತ್ತಿರ ಹೋದೆ. ಅಲ್ಲಿ ಯಾರೂ ಇರಲಿಲ್ಲ. ಮನೆಯ ಸೋಗೆ ಹಾರಿ ಹೋಗಿತ್ತು. ಅರ್ಧ ಬಿದ್ದ ಗೋಡೆಗಳು ನನ್ನನ್ನು ನೋಡಿ ಯಾವುದೂ ಶಾಶ್ವತವಲ್ಲ ಎಂದು ಅಣಕಿಸುತ್ತಿತ್ತು.





ಇವೆಲ್ಲವನ್ನೂ ಒಟ್ಟುಗೂಡಿಸಿ, ಭಾರತದ ಸಾಂಸ್ಕೃತಿಕ, ಧಾರ್ಮಿಕ ಕೇಂದ್ರವಾದ ವಾರಣಾಸಿಯಲ್ಲಿ ರಾಷ್ಟ್ರೀಯ ಮ್ಯೂಸಿಯಂ ಒಂದನ್ನು ಸ್ಥಾಪಿಸಬೇಕೆನ್ನುವುದು ಅವರ ಬಯಕೆ ಯಾಗಿದ್ದಿತು; ಆದರೆ ಇದಕ್ಕೆ ಅವಕಾಶವಾಗಲಿಲ್ಲ. ಯಾವುದಾದರೊಂದು ಭಾರತೀಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದುಕೊಂಡು ಭಾರತದಲ್ಲೇ ಉಳಿಯಬೇಕೆಂದು ಹಂಬಲಿಸಿದರು. ಇದೂ ನೆರವೇರಲಿಲ್ಲ. ಕೊನೆಗೆ, ನಿರಾಶೆಯಿಂದ ಅವರು ಅಮೇರಿಕೆಯನ್ನು ಸೇರಿದರು. ಅಲ್ಲಿಯ ಬೋಸ್ಟನ್ ಮ್ಯೂಸಿಯಂನಲ್ಲಿ 'ಭಾರತೀಯ ಕಲೆಗಳ ರಕ್ಷಕ'ರಾಗಿ ನೇಮಕವಾದರು. ಅಪೂರ್ವ ಕಲಾನಿಧಿಯೊಂದು ಹೀಗೆ ತವರೂರನ್ನು ಬಿಟ್ಟು ದೂರದ ಬೋಸ್ಟನ್ ಮ್ಯೂಸಿಯಂನ್ನು ಸೇರಿತು. ಇಂಥದೊಂದು ಅಮೂಲ್ಯ ಕಲಾಸಂಗ್ರಹವನ್ನು ಉಳಿಸಿಕೊಳ್ಳದೇ ಹೋದುದು ನಮ್ಮ ಪಾಲಿಗೆ ದಿಟವಾಗಿಯೂ ದೊಡ್ಡ ನಷ್ಟ.

ಕುಮಾರಸ್ವಾಮಿಯವರಿಗೆ ಇಂಗ್ಲಿಷ್, ಸಂಸ್ಕೃತ, ಪಾಳಿ, ಪ್ರಾಕೃತ, ಸಿಂಹಳೀ ಬಂಗಾಲೀಭಾಷೆಗಳಲ್ಲದೆಯೇ ಅರ್ರ್ಯಾಬಿಕ್, ಅವೆಸ್ತನ್, ಪರ್ಶಿಯನ್, ಗ್ರೀಕ್, ಲ್ಯಾಟಿನ್, ಫ್ರೆಂಚ್, ಇಟ್ಯಾಲಿಯನ್, ಸ್ಪ್ಯಾನಿಷ್ ಮುಂತಾದ ಹತ್ತಾರು ಭಾಷೆಗಳಲ್ಲಿ ಪ್ರಭುತ್ವವಿದ್ದಿತು. ಆಯಾ ಭಾಷೆಗಳ ಮೂಲ ಗ್ರಂಥಗಳನ್ನೆಲ್ಲ ಮೂಲದಲ್ಲೇ ಅಧ್ಯಯನ ಮಾಡಿದ್ದರು. ವೇದ, ಉಪನಿಷತ್ತು, ಬೌದ್ಧ–ಜೈನದರ್ಶನಗಳಲ್ಲದೆ ಕ್ರೈಸ್ತಮತ, ಇಸ್ಲಾಂಮತ, ಸೂಫಿತತ್ತ್ವ, ಚೀನಿ – ಜಪಾನ್ ದರ್ಶನ ಮುಂತಾದ ಹಲವು ಮತಸಿದ್ಧಾಂತಗಳನ್ನೂ ಕರಗತವಾಡಿಕೊಂಡಿದ್ದರು. ಅವರ ಬರವಣಿಗೆಯನ್ನು ಗಮನಿಸಿರುವವರಿಗೆ ಅವರ ಅಧ್ಯಯನದ ವಿಸ್ತಾರ, ತಿಳಿವಿನ ಔದಾರ್ಯ, ಸತ್ಯಾನ್ವೇಷಣೆಯಲ್ಲಿ ನಿಷ್ಠೆ, ಪ್ರವೃತ್ತಿಯಲ್ಲಿ ಆಧ್ಯಾತ್ಮಿಕತೆ – ಇವು ಎದ್ದುಕಾಣುವ ವಿವರಗಳು. ಅವರು ತಮ್ಮ ಈ ವಿಶಾಲ ನೆಲೆಯಿಂದ ಹೇಳುತ್ತಿದ್ದುದು; 'ಜಗತ್ತಿಗೇ ಭಾರತ ಗುರು'.

ಬೋಸ್ಟನ್ ವಸ್ತುಸಂಗ್ರಹಾಲಯವನ್ನು ಸೇರಿದ ಮೇಲೆ ಕುಮಾರಸ್ವಾಮಿಯವರು ತಮ್ಮ ಬದುಕನ್ನು ಜ್ಞಾನೋಪಾಸನೆಗೇ ಅರ್ಪಿಸಿಕೊಂಡರು. ಲೌಕಿಕಜೀವನದಲ್ಲಿ ಅವರಿಗೆ ಆಸಕ್ತಿ ಅಷ್ಟಾಗಿ ಉಳಿದುಕೊಳ್ಳಲಿಲ್ಲ. ಅವರು ಒಂದೆಡೆ ಹೀಗೆಂದಿದ್ದಾರೆ: "ನಾನೊಬ್ಬ ಸಮಾಜ ಸುಧಾಕರನೂ ಅಲ್ಲ, ಪ್ರಚಾರಕನೂ ಅಲ್ಲ. ನನ್ನ ಬಗ್ಗೆ ನಾನೆಂದಿಗೂ ತಲೆಕೆಡಿಸಿಕೊಳ್ಳುವುದಿಲ್ಲ. ನಾನು ಯಾವುದೇ ನೂತನ ಸಿದ್ಧಾಂತವನ್ನಾಗಲೀ, ನನ್ನದೇ ತತ್ತ್ವವನ್ನಾಗಲೀ ಅಥವಾ ವ್ಯಾಖ್ಯಾನವನ್ನಾಗಲೀ ಮಂಡಿಸುತ್ತಿಲ್ಲ. ನಿರ್ವಿಕಾರಸತ್ಯವೆಂದು ನಾನು ತಿಳಿದುಕೊಂಡಿರುವುದನ್ನು ಅರ್ಥಮಾಡಿಕೊಳ್ಳಲು ಜೀವನದುದ್ದಕ್ಕೂ ಪ್ರಯತ್ನಿಸುವುದಷ್ಟೆ ನನ್ನ ಕೆಲಸ. ಇದರಲ್ಲೂ ಕೂಡ, ಮೊದನೆಯ ಆದ್ಯತೆಯೆಂದರೆ ನನ್ನ ಆತ್ಮೋನ್ನತಿಯೇ; ಅನಂತರದಲ್ಲಿ, ಈ ನನ್ನ ಫಲಿತಾಂಶಗಳನ್ನು ಬೇರೆಯವರೂ ಬಳಸಿಕೊಳ್ಳ ಬಹುದು. ನನ್ನ ದೃಷ್ಟಿಯಲ್ಲಿ, ಕೆಲವು ಸೂತ್ರಗಳು, ಸಿದ್ಧಾಂತಗಳು, ವಮೌಲ್ಯಗಳು ಪ್ರಶ್ನಾತೀತವಾದಂಥವು. ನನ್ನ ಆಸಕ್ತಿಯಿರುವುದು ಹೊಸ ಹೊಸ ಸಿದ್ಧಾಂತಗಳನ್ನು ಕುರಿತು ಚಿಂತಿಸುವುದರಲ್ಲಿ ಅಲ್ಲ; ಈಗಾಗಲೇ ಸ್ಥಾಪಿತವಾಗಿರುವಂಥವುಗಳ ನಿದಿಧ್ಯಾಸನದಲ್ಲಿ."

ಕಲೆ ಮತ್ತು ನಮ್ಮ ನಿತ್ಯದ ವ್ಯವಹಾರಗಳ ನಡುವೆ ಒಂದು ಪವಿತ್ರ ಸಂಬಂಧವಿದೆ; ಕಲೆಗೂ ಆಧ್ಯಾತ್ಮಿಕತೆಗೂ ಹತ್ತಿರದ ನಂಟು; ನಮ್ಮ ನಿತ್ಯಜೀವನವನ್ನು ಹಸನುಗೊಳಿಸುವುದೇ ಕಲೆಯ ಗುರಿಯಾಗಬೇಕೆಂದು ಅವರು ಪ್ರತಿಪಾದಿಸಿದರು. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಕಲಾಪ್ರಜ್ಞೆಯು ಜಾಗೃತವಾಗಿರಬೇಕೆಂದೂ, ಭಾರತದ

> "ಕಳೆದ ಮೂರು ಸಾವಿರ ವರ್ಷಗಳಲ್ಲಿ ಭಾರತ ಬದುಕಿರುವ ಬಗೆಯನ್ನು ನೋಡಿ. ಈ ನೆಲದ ಸಾಹಿತ್ಯ ಪರಂಪರೆ, ಆದರ್ಶಗಳನ್ನು ಗಮನಿಸಿ, ಅಲ್ಲಿಯ ದಾರ್ಶನಿಕರು ನಡೆಸಿರುವ ಅನ್ವೇಷಣೆ, ಕಲಾವಿದರು ಮಾಡಿರುವ ಕೆಲಸ, ಈ ನಾಡಿನ ಜನರ ಸಂಗೀತ ಮತ್ತು ಇಲ್ಲಿ ಬೆಳೆದು ಬಂದಿರುವ ಧರ್ಮದ ಉದಾತ್ತತೆ – ಇವನ್ನೆಲ್ಲ ದೃಷ್ಟಿಯಲ್ಲಿರಿಸಿಕೊಂಡು ನೋಡಿದಾಗ, ಈ ಎಲ್ಲ ವಿವರಗಳಿಂದ ನನ್ನ ಮನಸ್ಸಿನಲ್ಲಿ ಆದರ್ಶ ಭಾರತದ ಚಿತ್ರವೊಂದನ್ನು ಮೂಡಿಸಿಕೊಂಡಾಗ, ಇದಕ್ಕಿಂತ ಹೆಚ್ಚು ಶಕ್ತಿಯುತವಾದ ಪ್ರೇರಣೆಯ ಉಗಮಸ್ಥಾನ ಮತ್ತೊಂದು ಇರಲಾರದು, ಇದಕ್ಕಿಂತ ಹೆಚ್ಚು ಗಂಭೀರವಾದ ಸತ್ಯದ ಸೆಲೆ ಮತ್ತೊಂದು ಇರಲಾರದು",
>
> – ಆನಂದ ಕುಮಾರಸ್ವಾಮಿ

ಸಂದರ್ಭದಲ್ಲಿ ಆಧ್ಯಾತ್ಮಿಕತೆ ಮತ್ತು ಕಲಾಪರಿಪೂರ್ಣತೆ – ಇವೆರಡೂ ಒಂದೇ ತತ್ತ್ವ ಎಂದೂ ಅವರು ವಿವರಿಸಿದರು. ಭಾರತೀಯ ಕಲಾಪರಂಪರೆಯ ಉಗಮಸ್ಥಾನ ಗ್ರೀಸ್ – ರೋಮ್‌ಗಳಲ್ಲ; ಭಾರತೀಯ ಕಲೆಯ ಮೂಲ ಭಾರತವೇ – ಎಂಬುದನ್ನು ಅವರು ಸ್ಥಾಪಿಸಿದರು.

ಆಧುನಿಕತೆಯ ಸುಂಟರಗಾಳಿಯಲ್ಲಿ ಸಿಲುಕಿ ಬಿದ್ದಿರುವ ಮನುಷ್ಯ ಇಂದು ಸೂಕ್ಷ್ಮಸಂವೇದನಶೀಲತೆಯನ್ನೇ ಕಳೆದುಕೊಳ್ಳುತ್ತಿದ್ದಾನೆಂದು ಅವರು ಪರಿತಪಿಸಿದರು. ಪ್ರಪಂಚದ ಮೂಲೆಮೂಲೆಗಳಲ್ಲಿರುವ ಅಪೂರ್ವ ವಸ್ತುಗಳು ತಾಂತ್ರಿಕತೆಯಿಂದ ನಮ್ಮದಾಗಿರಬಹುದು. ಆದರೆ ಇದಕ್ಕೆ ನಾವು ತೆತ್ತಿರುವ ಬೆಲೆಯೂ ಅಪಾರ. ಕೈಗಾರಿಕಾ ಕ್ರಾಂತಿಯು ಬದುಕಿನ ಕಲಾಶ್ರೀಮಂತಿಕೆಯನ್ನೇ ಉಧ್ವಸ್ತಗೊಳಿಸಿ, ಸಂಸ್ಕೃತಿಯ ತಾಯಿಬೇರುಗಳನ್ನೇ ಕಿತ್ತೊಗೆದುಬಿಟ್ಟಿದೆ ಎಂದು ದುಃಖಿತರಾದರು. ಈ ಸಾಂಸ್ಕೃತಿಕ ಶೂನ್ಯತೆಯನ್ನು ಮನಗಂಡು, ಕಲಾಧರ್ಮದ ಪುನರುಜ್ಜೀವನಕ್ಕಾಗಿ ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು.

ಕುಮಾರಸ್ವಾಮಿಯವರ ಕೆಲವು ಕೃತಿಗಳು ಇವು : 'ಹಿಸ್ಟರಿ ಆಫ್ ಇಂಡಿಯನ್ ಎಂಡ್ ಇಂಡೋನೇಶಿಯನ್ ಆರ್ಟ್', 'ಆರ್ಟ್ ಎಂಡ್ ಸ್ವದೇಶಿ' 'Essays in National Idealism', ' Mediaeval Sinhalese Art', 'ಹಿಂದೂಯಿಸಂ ಎಂಡ್ ಬುದ್ಧಿಸಂ', ಟ್ರಾನ್ಸ್‌ಫರ್‌ಮೇಶನ್ ಆಫ್ ನೇಚರ್ ಇನ್ ಆರ್ಟ್', ಬುದ್ಧ ಎಂಡ್ ದ ಗಾಸ್ಪೆಲ್ ಆಫ್ ಬುದ್ಧಿಸಂ', ದ ಡ್ಯಾನ್ಸ್ ಆಫ್ ಶಿವ', ಫಿಗರ್ಸ್ ಆಫ್ ಸ್ಪೀಚ್ ಆರ್ ಫಿಗರ್ಸ್ ಆಫ್ ಥಾಟ್', 'Mirror of Gesture' (ದುಗ್ಗಿರಾಲ ಗೋಪಾಲಕೃಷ್ಣ ಅವರೊಂದಿಗೆ), Myths of the Hindus and Buddhists' (ಸೋದರಿ ನಿವೇದಿತಾ ಅವರೊಂದಿಗೆ) 'Rajput painting', 'A New Approach to the Vedas'.

ಕುಮಾರಸ್ವಾಮಿಯವರು ತಮ್ಮ ಬದುಕಿನ ಕೊನೆಯ ದಿನಗಳನ್ನು ತಮಗೆ ಸ್ಫೂರ್ತಿಕ್ಷೇತ್ರವಾಗಿದ್ದ ಭಾರತದಲ್ಲಿಯೇ ಕಳೆಯಬೇಕೆಂದು ಬಯಸಿದ್ದರು. ಆದರೆ ಅವರ ಕೊನೆಯ ಆಸೆ ಕೈಗೂಡಲಿಲ್ಲ. 1947ರ ಸೆಪ್ಟೆಂಬರ್ 9ರಂದು ಅಮೇರಿಕೆಯಲ್ಲೇಯೇ ಕೊನೆಯುಸಿರೆಳೆದರು. ಅನಂತರ, ಮುಂದೆ ಅವರ ಮಡದಿ ದೋನಾ 1965ರಲ್ಲಿ ಭಾರತಕ್ಕೆ ಬಂದು ಕುಮಾರಸ್ವಾಮಿಯವರ ಚಿತಾಭಸ್ಮವನ್ನು ತ್ರಿವೇಣಿ ಸಂಗಮದಲ್ಲಿ ವಿಸರ್ಜಿಸಿದರು.

ಆನಂದ ಕುಮಾರಸ್ವಾಮಿ ಒಬ್ಬ ವಿಶ್ವಮಾನವ. "ನನ್ನ ಆಸೆ ಭಾರತದೇಶಕ್ಕಷ್ಟೇ ಸೇವೆ ಸಲ್ಲಿಸುವುದಲ್ಲ; ಇಡೀ ಮಾನವ ಸಮಾಜಕ್ಕೇ ನನ್ನ ಸೇವೆ ಸಲ್ಲಬೇಕು. ಅವಲೋಕಿತೇಶ್ವರನ ಆದರ್ಶವನ್ನು ಪಾಲಿಸಿ, ಸಾಧ್ಯವಾದಷ್ಟು ವಿಶ್ವಕುಟುಂಬಿ ಯಾಗಬೇಕೆಂಬುದು ನನ್ನ ಆಸೆ" ಎನ್ನುವುದು ಅವರ ನಿತ್ಯ ಪ್ರಾರ್ಥನೆಯಾಗಿದ್ದಿತು. ಮಾನವನ ನೆಲೆ-ಬೆಲೆಗಳನ್ನೂ, ಬದುಕಿನ ಆಳ-ಅಗಲಗಳನ್ನೂ ಅರಿಯಬಯಸುವವರಿಗೆಲ್ಲ ಕುಮಾರಸ್ವಾಮಿಯವರ ಬರೆಹಗಳ ಅಧ್ಯಯನ ಒಂದು ಮಹಾಸಂಸ್ಕಾರ; ಹಾಗೆಯೇ, ಭಾರತೀಯ ಕಲೆ-ಸಂಸ್ಕೃತಿ-ದರ್ಶನಗಳ ಹೃದಯ ನಮಗೆ ಹತ್ತಿರವಾಗಲು ಇದು ಅನಿವಾರ್ಯ ಸಂಸ್ಕಾರವೂ ಹೌದು.

**– ಎಸ್. ಸೂರ್ಯಪ್ರಕಾಶ ಪಂಡಿತ್**

>>>><<<<<

**ಅವರ ಬರೆಹಗಳೆಲ್ಲವೂ ಪ್ರಧಾನವಾಗಿ ವಿದ್ವಾಂಸರನ್ನೇ ದೃಷ್ಟಿಯಲ್ಲಿರಿಸಿಕೊಂಡಂಥವು. ಇದಕ್ಕೆ ಅವರೇ ಕೊಟ್ಟಿರುವ ಕಾರಣ – "ಹಲವರು ಸ್ವಯಂಘೋಷಿತ ವಿದ್ವಾಂಸರು ನಮ್ಮ ಧರ್ಮ, ಕಲೆ ಮೊದಲಾದ ವಿವರಗಳನ್ನು ಸರಿಯಾಗಿ ಮನದಟ್ಟುಮಾಡಿಕೊಳ್ಳದೆ ಮೇಲುಮೇಲಷ್ಟೆ ತಿಳಿದುಕೊಂಡು ಅಪಾರ್ಥ ಕಲ್ಪಿಸುತ್ತಿದ್ದಾರೆ. ಇಂಥವರು ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದು ಅವರ ಮಾತೇ ಪ್ರಮಾಣವೆಂದು ನಂಬುವಂತಾಗಿದೆ. ಅವರ ಬರಹಗಳನ್ನು ಆಧರಿಸಿಯೇ ಶಾಲಾ-ಕಾಲೇಜುಗಳ ಪಠ್ಯಪುಸ್ತಕಗಳು ಸಿದ್ಧವಾಗುತ್ತಿವೆ. ಹೀಗಾಗಿ, ಭಾರತೀಯ ಸಂಸ್ಕೃತಿಯ ಸತ್ತ್ವವೇ ಜನರ ಗಮನದಿಂದ ದೂರವಾಗತೊಡಗಿದೆ. ಆದುದರಿಂದಲೇ ನನ್ನ ಬರಹಗಳನ್ನು ವಿಶ್ವ ವಿದ್ಯಾನಿಲಯಗಳ ಪ್ರಾಧ್ಯಾಪಕರು, ತಜ್ಞರು ಇವರನ್ನೇ ದೃಷ್ಟಿಯಲ್ಲಿರಿಸಿಕೊಂಡು ಬರೆಯುತ್ತಲಿದ್ದೇನೆ."**

>>>><<<<<





ಭಾವಭಿತ್ತಿ

# ಮಂಜೂ

**ಹಳ್ಳಿಮನೆಯಲ್ಲಿ ಬಾಲ್ಯ ಕಳೆದ ಪ್ರತಿಯೊಬ್ಬರ ಜೀವನದಲ್ಲೂ 'ಮಂಜು' ವಿನಂತಹ ಮುಗ್ಧರು ಬಂದುಹೋಗಿರಬಹುದು.........**

**–ಯಜ್ಞೇಶ್ ಭಟ್, ಬೆಂಗಳೂರು**

"ಮಂಜೂ..." ಅಂತ ಕರೆದೆ.

"ಬಂದೇ..." ಅಂತ ಗುಡಿಸಿಲಿನ ಒಳಗಿಂದ ಒಂದು ಆಕೃತಿ ಬಂತು. ಊರುಗೋಲು ಹಿಡಿದು ಹೊರಗೆ ಬಂದು ನನ್ನನ್ನು ದಿಟ್ಟಿಸಿ 'ಓ ಅಪ್ಪಿ, ಯಾವಾಗ ಬಂದ್ರಿ" ಅಂದ. ನನ್ನಜ್ಜನ ವಯಸ್ಸಿನ ಮಂಜು ನನಗೆ ಗೌರವ ಕೊಟ್ಟಿದ್ದು ಇರಿಸುಮುರಿಸಾಯ್ತು. ಒಳಗಿಂದ ಯಾರು ಅಂತ ಹೇಳ್ತಾ ಮಂಜು ಹೆಂಡ್ತಿ ಮಂಜಿ ಬಂದ್ಲು. ಮಂಜಿಗೆ ಇತ್ತೀಚೆಗೆ ಕಣ್ಣು ಕಾಣಿಸೊಲ್ಲ ಅಂತ ಅಮ್ಮ ಹೇಳಿದ್ದು ನೆನಪಾಯ್ತು. "ಭಟ್ಟರ ಮಗ ಬಂದಿದಾರೆ" ಅಂತ ಮಂಜು ಹೇಳ್ದ. ಅವನನ್ನೇ ಗಮನಿಸಿದೆ. ಮಂಜು ಬಹಳ ಸೋತು ಹೋಗಿದ್ದ. ಬಟ್ಟೆ ಹರಿದು ಹೋಗಿತ್ತು. ಬಣ್ಣ ಮಾಸಿತ್ತು. 'ಏನ್ ಯೋಚ್ನೆ ಮಾಡ್ತಾಯಿದೀರ ಬುದ್ಧಿ" ಅಂತ ಮಂಜು ಕೇಳಿದಾಗಲೇ ನಾನು ವಾಸ್ತವಕ್ಕೆ ಬಂದಿದ್ದು. "ನಿಂದೊಂದು ಫೋಟೋ ತಗೋಬೇಕು" ಅಂದೆ. ಹೊಸದಾಗಿ ಕ್ಯಾಮೆರಾ ತಗೊಂಡಿದ್ದೆ. ಊರಿಗೆ ಹೋದಾಗ ಮಂಜು ಮತ್ತು ಮಂಜಿಯ ಫೋಟೋ ತಗೋಬೇಕು ಅಂತ ಬಹಳ ದಿನದಿಂದ ಯೋಚಿಸಿದ್ದೆ. ನಾನು ಹೇಳಿದ ತಕ್ಷಣ ಮಂಜು ಗುಡಿಸಿಲಿನ ಒಳಗೆ ಹೋದ. ಹೋಗೋವಾಗ ಹೆಂಡ್ತಿಯನ್ನು ಒಳಗೆ ಕರ್ಕೊಂಡು ಹೋದ. ಯಾಕೆ ಮಂಜು ಹೋದ, ನಾನೇನಾದ್ರೂ ತಪ್ಪು ಮಾತಾಡಿದ್ನೆ ಅಂತ ಗಾಬರಿಯಾದೆ. 2 ನಿಮಿಷ ಮೌನವಾಗಿದ್ದೆ. ಮತ್ತೆ ಕರೆದೆ. ಒಳಗಿಂದ "ಬಂದೇ" ಅಂದ. 5 ನಿಮಿಷ ಬಿಟ್ಟು ಇಬ್ರೂ ಹೊರಗೆ ಬಂದಿದ್ರು. ಇದ್ದ ಬಟ್ಟೆಯಲ್ಲಿ ಚೆನ್ನಾಗಿರೋದನ್ನ ಆರಿಸಿ ಉಟ್ಟುಕೊಂಡು ಬಂದಿದ್ರು. ಒಂದೆರಡು ಫೋಟೋ ತಗೊಂಡು. ಕೊನೆಗೆ ಮನೆಗೆ ಬಾ ಅಂತ ಹೇಳಿ ಹೊರಟೆ. ನಾನು ಮನೆಯ ದಾರಿ ಹಿಡಿದಿದ್ದೆ. ಆದ್ರೆ ನನ್ನ ಮನಸ್ಸು ಬಾಲ್ಯದ ಕಡೆ ಪಯಣಿಸಿತ್ತು.

"ಸರಿಯಾಗಿ ಓದದೇ ಹೋದ್ರೆ ದನ ಕಾಯೋಕೆ ಹೋಗು" ಅಂತ ನಾವು ಸಣ್ಣಕಿದ್ದಾಗ ಎಲ್ಲ ಹೇಳ್ತಿದ್ರು. ಅದ್ರಲ್ಲೂ 'ಭೀಮನಕೋಣೆಗೆ ದನ ಕಾಯೋಕೆ ಹೋಗು' ಅಂತಿದ್ರು. ಇಂದಿಗೂ ನನಗೆ ಭೀಮನಕೋಣೆಗೂ ದನ ಕಾಯೋದಕ್ಕೂ ಏನು ಸಂಬಂಧ ಅಂತ ಗೊತ್ತಿಲ್ಲ. ಇದು ಸಾಗರದ ಹತ್ತಿರ ಇರೋ ಒಂದು ಸಣ್ಣ ಗ್ರಾಮ. ಬಹುಶಃ ಹಿಂದೆ ಭೀಮನಕೋಣೆ ದನ ಕಾಯೋದಕ್ಕೆ ಹೆಸರುವಾಸಿಯಾಗಿರಬೇಕು. ಇರಲಿ, ಅದು ಇಲ್ಲಿ ಅಪ್ರಸ್ತುತ. ಆವಾಗ ನನಗೆ ದನ ಕಾಯೋದು ಅಂದ್ರೆ ಕೀಳು ಮಟ್ಟದ ಕೆಲಸ ಅನ್ನೋ ಭಾವನೆಯಿತ್ತು.

# ಆತ ಅದಕ್ಕಾಗಿ ಕಾದದ್ದು 21 ವರ್ಷ!!

ಸ್ವಾತಂತ್ರ್ಯದ ದಿವ್ಯ ಸ್ಮೃತಿ



ಜಲಿಯನ್ ವಾಲಾಬಾಗ್. ಬ್ರಿಟಿಷ್ ಆಡಳಿತದ ಒಂದು ಕರಾಳ ಅಧ್ಯಾಯ. ಅದರ ಖಳನಾಯಕ ಸರ್ ಮೈಕಲ್ ಓಡ್ವಾಯರ್ ಅದಾದ ನಂತರ ಲಂಡನ್ನಿಗೆ ತೆರಳಿದ್ದ. ಈ ಕ್ರೂರಕೃತ್ಯಕ್ಕಾಗಿ ಆತನನ್ನು ಹತ್ಯೆಗೈದೇ ತೀರುತ್ತೇನೆ ಎಂದು ಪಣತೊಟ್ಟಿದ್ದ ದೇಶಭಕ್ತ ಉಧಮ್ ಸಿಂಗ್. ಈ ಕಾರ್ಯಕ್ಕಾಗಿ ಲಂಡನ್ನಿಗೆ ತೆರಳಿದ ಉಧಮ್ ಅದಕ್ಕಾಗಿ ಕಾದದ್ದು ಬರೋಬರಿ 21 ವರ್ಷ!! ಕೊನೆಗೂ 1940ರ ಮಾರ್ಚ್ 13ರಂದು ತುಂಬಿದ ಸಭೆಯಲ್ಲಿ ಓಡ್ವಾಯರ್‌ನನ್ನು ಹತ್ಯೆಗೈದ ಉಧಮ್ ಆತನ ಕ್ರೂರಕೃತ್ಯಕ್ಕೆ ಆತನ ಲಂಡನ್ನಿನ ನೆಲದಲ್ಲೇ ಉತ್ತರಕೊಟ್ಟಿದ್ದ.



# ಹಾಗೆ ಸುಮ್ಮನೆ......



ಭಾವ ರಶ್ಮಿ

–ಅನುಶ್ರೀ ಬಂದಾಡಿ, ಮಂಗಳೂರು

ತುಂತುರು ಮಳೆ ಹನಿಗಳು ಪಟ ಪಟನೆ ಸುರಿದು, ಸುತ್ತಲೂ ತಂಪೆರೆಯುತ್ತಿವೆ. ಅದಕ್ಕೊಪ್ಪುವಂತೆ, ಪೂರ್ಣ ಚಂದಿರನ ಹಾಲ್ಬೆಳದಿಂಗಳ ಹಿನ್ನೆಲೆ. ಸಾವಿರಾರು ಜನರಿಂದ ಪ್ರತಿನಿತ್ಯ ತುಳಿಯಲ್ಪಟ್ಟರೂ ಅವರೆಲ್ಲರಿಗೂ ದೇಗುಲದೊಳಗೆ ಹೋಗಲು ನೆರವಾಗುತ್ತಿದ್ದ ಸಾಲು ಮೆಟ್ಟಿಲ ಮೇಲೆ ಹಾಗೇ ಕುಳಿತಿದ್ದೇನೆ. ಚಂಚಲ ಚಿನಕುರುಳಿ ಮನಸ್ಸು. ಬೇಡವೆಂದರೂ ಸುತ್ತಿ ಸುಳಿವ ನೂರಾರು ನೆನಪುಗಳು. ಮಳೆಹನಿಗಳಿಂದ ದೇಹಪೂರ್ತಿ ಒದ್ದೆಯಾಗಿದ್ದರೂ, ಮನದ ತುಂಬ ಬರೀ ಶುಷ್ಕತೆ.

'ಜೀವನ', ಅದೆಷ್ಟು ಕುತೂಹಲಕರವಾದುದು! ದಿನ ದಿನವೂ ಹೊಸ ಹೊಸ ಅನುಭವಗಳು. ನಿನ್ನೆ ಇದ್ದುದು ಇಂದು ಇರಲಾರದು. ಇಂದಿನದು ನಾಳೆ ದೊರೆಯದು. ಮೊನ್ನೆ ಪರಿಚಯವಾದ ಅಪರಿಚಿತರೊಬ್ಬರು, ನಿನ್ನೆ ತೀರಾ ಪರಿಚಿತರಾಗಿ, ನಮ್ಮಲ್ಲೊಬ್ಬರಂತೆ ಬೆರೆತು, ಇಂದು, ಕಂಡರೂ ಕಾಣದಂತೆ, ಹಿಡಿದ ಕೈಯ ಕಿರುಬೆರಳ ಚಿವುಟಿ, ಮತ್ತೆ ಹಿಂತಿರುಗಿ ನೋಡದೆ ಅನಂತದಲ್ಲಿ ಮರೆಯಾಗಿ ಬಿಡುತ್ತಾರೆ. ಮೊನ್ನೆ ಮೊನ್ನೆಯವರೆಗೆ ಮನದಾಳದ ಭಾವನೆಯ ತುಡಿತಗಳನ್ನೆಲ್ಲ ಒಡಹುಟ್ಟಿದವರಂತೆ ಹಂಚಿಕೊಳ್ಳುತ್ತಿದ್ದವರಿಗೆ ಇಂದು ಒಂದೆರೆಡು ಸಿಹಿ ಮಾತನಾಡಲೂ ಸಮಯ ಸಿಗದು. ಸಿಕ್ಕರೂ, ಮಾತು ಬರದು. ಸಿಕ್ಕ ಸಿಕ್ಕ ವಿಷಯಗಳ ಹಿಡಿದು ಹರಟುತ್ತಿದ್ದವರಿಗೆ, ಇಂದು ವಿಷಯವೇ ಸಿಗುತ್ತಿಲ್ಲ. ಹುಂ, ಚುಚ್ಚು ಮಾತುಗಳಿಗೇನೂ ಕಡಿಮೆಯಿಲ್ಲ ಬಿಡಿ. ಮರೆಯಲು ಸಾಧ್ಯವಿಲ್ಲವೆಂದರೂ ಪ್ರಯತ್ನಿಸುತ್ತಿರುವಾಗ, ಆ ಜಾಗದಲ್ಲಿ ಅದಾಗಲೇ ಮತ್ತೊಬ್ಬರಿರುತ್ತಾರೆ. ಇನ್ನೊಂದಿಷ್ಟು ಕನಸುಗಳ ಹೊತ್ತುಕೊಂಡು, ಮತ್ತದೇ ಚಕ್ರ. ಒಮ್ಮೆ ಹಾಗೇ ಹಿಂದಿರುಗಿ ನೋಡಿದರೆ, ಅಬ್ಬ! ಅದೆಷ್ಟು ಜನರು.... ಮಾತನಾಡಿದವರು, ಮುಗುಳ್ನಗೆ ಬೀರಿದವರು, ಕಣ್ಣಲ್ಲೇ ಕಾಡಿದವರು, ನಗುವಲ್ಲೇ ತಿವಿದವರು, ಒಂಟಿಯಾಗಿ ದಾರಿ ಸವೆಸುತ್ತಿದ್ದಾಗ ಜೊತೆಯಾಗಿ ನಡೆದವರು, ಮೈಮರೆತಾಗ ಬಡಿದೆಬ್ಬಿಸಿದವರು, ಚಿಂತೆಗಳ ಸುತ್ತ ಸುತ್ತಿ ತಲೆತಿರುಗಿ ಬಿದ್ದಾಗ ಹಿಡಿದೆತ್ತಿ ಸಂತೈಸಿದವರು, ಮನಬಿಚ್ಚಿ ಅಳುತಿರಲು ಪ್ರೀತಿಯ ಮಡಿಲೊಳಗೆ ಮಲಗಿಸಿಕೊಂಡವರು, ತಪ್ಪು ಮಾಡಿದಾಗ ತಿದ್ದಿ ತಿಳಿಹೇಳಿದವರು, ಹೊಸ ಹೊಸತು ಕಲಿವ ಬಯಕೆಗೆ ಪ್ರೋತ್ಸಾಹವಿತ್ತು ಪೋಷಿಸಿದವರು, ಮನಮುಟ್ಟುವಂತೆ ಕಲಿಸಿಕೊಟ್ಟವರು........ ಇಲ್ಲ, ಎಣಿಸಲು ಸಾಧ್ಯವಿಲ್ಲ. ಅದೆಷ್ಟು ಜನರು ನಮ್ಮ ಜೀವನದಿ ಬಂದು ಹೋಗಿದ್ದಾರೆ, ಬರುತ್ತಲಿದ್ದಾರೆ? ಬಂದವರು ಎಷ್ಟು ಜನ ಜೊತೆಯಲ್ಲುಳಿದಿದ್ದಾರೆ? ಇನ್ನೂ ಅದೆಷ್ಟು ಜನ ಬರುವವರಿದ್ದಾರೆ?

ಉತ್ತರವಿಲ್ಲದ ಪ್ರಶ್ನೆಗಳು, ಅದೆಷ್ಟು ಜನರಿಗೆ ನಾವು ಋಣಿಗಳಾಗಿದ್ದೇವೆ? ಋಣಿಯಾಗಿರುವುದು ಬಿಡಿ. ಕನಿಷ್ಟಪಕ್ಷ ಅವರೆಲ್ಲರ ನೆನಪಾದರೂ ಇದೆಯೇ?

## ಸ್ವಾತಂತ್ರ್ಯದ ದಿವ್ಯ ಸ್ಮೃತಿ

### ವಿದೇಶಿ ವಸ್ತುಗಳ ವಿರುದ್ಧ ಮೊದಲ ಬಲಿದಾನ!!!



1930, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವ ಸುಟ್ಟು ಹಾಕುವ ಚಳುವಳಿಗೆ ಕಾವು . 1930 ರ ಡಿಸೆಂಬರ್ 12ರಂದು ಇಂಗ್ಲೆಂಡಿನಿಂದ ಹಡಗಿನಲ್ಲಿ ಬಂದ ಥಾನುಗಟ್ಟಲೆ ಬಟ್ಟೆಯನ್ನು ಲಾರಿಯಲ್ಲಿ ತುಂಬಿಕೊಂಡು ಬರಲಾಗುತ್ತಿತ್ತು. ಸುದ್ದಿ ತಿಳಿದ ಬಾಬು ಗೇಣು, ಗುಜರಾತಿನಿಂದ ಮುಂಬೈಗೆ ಬಂದ ಸಾಮಾನ್ಯ ಕಾರ್ಮಿಕ ಲಾರಿಯನ್ನು ತಡೆದು ಪ್ರತಿಭಟಿಸಲು ಮುಂದಾದ. ಲಾರಿಗೆ ಅಡ್ಡವಾಗಿ ಮಲಗಿ ಪ್ರತಿಭಟಿಸಿದ. ಆಗ ಬಂದ ಬ್ರಿಟೀಷ್ ಅಧಿಕಾರಿ ಆತನ ಮೇಲೆಯೇ ಲಾರಿ ಚಲಾಯಿಸಲು ಹೇಳಿದ. ನೋಡು ನೋಡುತ್ತಲೇ ಗೇಣು ಅಪ್ಪಚ್ಚಿಯಾದ. ವಿದೇಶಿ ವಸ್ತುಗಳ ವಿರುದ್ಧ ನಡೆದ ಮೊದಲ ಬಲಿದಾನ ಅದು!!. ಇಂದು ವಿದೇಶಿ ಚಿಂತನೆಯನ್ನೇ ಆವಾಹಿಸಿಕೊಂಡಿರುವ, ವಿದೇಶಿ ಮನಸ್ಥಿತಿಯನ್ನೇ ನಮ್ಮದಾಗಿಸಿಕೊಂಡಿರುವ ನಮಗೆ ಬಾಬು ಗೇಣು ಹೇಗೆ ನೆನಪಾದಾನು?





ಸತ್ಯ ಘಟನೆ ಆಧಾರಿತ ಸಂವಾದ ರೂಪದ ಕಥಾನಕ ಒಂದನ್ನು ಚೈತ್ರರಶ್ಮಿಗಾಗಿ ಅನುವಾದಿಸಿಕೊಟ್ಟಿದ್ದಾರೆ ರಾಘವೇಂದ್ರ ಅಗರ್ಖೇಡ್.

# ಜ಼ರಾ ಯಾದ್ ಕರೋ ಕುರ್ಬಾನಿ!

ಇದು ಬರಿ ಕಥೆಯಲ್ಲೋ ಅಣ್ಣಾ.....



ವಿವೇಕ್ ಪ್ರಧಾನ್ ರೈಲಿನ ಹವಾನಿಯಂತ್ರಿತ ಕಂಪಾರ್ಟ್‌ಮೆಂಟಿನಲ್ಲಿ ಪ್ರಯಾಣಿಸುತ್ತಿದ್ದರೂ ಸಹ ಏನೋ ಒಂದು ರೀತಿಯ ಕಸಿವಿಸಿ ಅನುಭವಿಸುತ್ತಿದ್ದ. ಒಂದು ಪ್ರತಿಷ್ಠಿತ ಸಾಫ್ಟವೇರ್ ಕಂಪನಿಯಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದರೂ ಸಹ ಆತನಿನ್ನೂ ವಿಮಾನ ಪ್ರಯಾಣದ ಸೌಲಭ್ಯದಿಂದ ವಂಚಿತನಾಗಿದ್ದ. ಆತನಿಗಿರುವ ನೂರಾರು ಮುಖ್ಯವಾದ ಕೆಲಸಗಳನ್ನು ಪೂರೈಸುವುದರ ಆತಂಕದ ಜೊತೆಗೆ ರೈಲು ಪ್ರಯಾಣದಿಂದಾಗುವ ಸಮಯವ್ಯಯ ಅವನ ಕಸಿವಿಸಿಗೆ ಮುಖ್ಯ ಕಾರಣವಾಗಿತ್ತು. ಹೀಗಿದ್ದಾಗ ಯಾವ ಮನುಷ್ಯ ಪ್ರಾಣಿ ತಾನೇ ಸಮಾಧಾನದಿಂದ ಇರಲಾಗುತ್ತದೆ??

ತನಗಿರುವ ಸಮಯದ ಸದುಪಯೋಗಪಡಿಸಿಕೊಳ್ಳಲು ನಿರ್ಧರಿಸಿದ ವಿವೇಕ್ ತನ್ನ ಲ್ಯಾಪ್‌ಟಾಪ್ ಅನ್ನು ಬ್ಯಾಗಿನಿಂದ ಹೊರತೆಗೆದು ಸ್ವಿಚ್ ಆನ್ ಮಾಡಿದ.

ಪಕ್ಕದಲ್ಲಿರುವ ವ್ಯಕ್ತಿ ಕುತೂಹಲದ ಕಣ್ಣುಗಳಿಂದ ವಿವೇಕ್‌ನ ಲ್ಯಾಪ್‌ಟಾಪ್‌ನ್ನು ದಿಟ್ಟಿಸಿ ನೋಡುತ್ತಾ "ತಾವು ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗಿಯೇ" ಎಂದು ಕೇಳಿದ... ಇದರಿಂದ ವಿವೇಕನಿಗೆ ಮತ್ತಷ್ಟು ಸ್ವಪ್ರತಿಷ್ಠೆ ಹೆಚ್ಚಿದಂತಾಗಿ ತನ್ನ ಲ್ಯಾಪ್‌ಟಾಪ್‌ನ್ನು ಅತ್ಯಂತ ಬೆಲೆಬಾಳುವ ಕಾರನ್ನು ಹೇಗೆ ನಡೆಸುತ್ತಾರೋ ಹಾಗೆ ಅತೀ ಜಾಗರೂಕತೆಯಿಂದ ಉಪಯೋಗಿಸತೊಡಗಿದ.

ಪಕ್ಕದ ವ್ಯಕ್ತಿ "ತಮ್ಮಂತಹವರೆಲ್ಲ ಸೇರಿ ದೇಶಕ್ಕೆ ತುಂಬಾ ಅಭಿವೃದ್ಧಿಯನ್ನು ತಂದಿದ್ದೀರಿ...ಎಲ್ಲ ಕ್ಷೇತ್ರಗಳೂ ಕಂಪ್ಯೂಟರೀಕರಣಗೊಳ್ಳುತ್ತಿವೆ" ಎಂದು ಮತ್ತಷ್ಟು ಉಬ್ಬಿಸಿದ. "ಧನ್ಯವಾದಗಳು" ಎಂದಷ್ಟೇ ಹೇಳಿ ಮುಗುಳ್ನಕ್ಕ ವಿವೇಕ್. ಹೊಗಳಿಕೆಯನ್ನು ಅಷ್ಟು ಸುಲಭವಾಗಿ ಒಪ್ಪಲೆಯೆನ್ನಲು ವಿವೇಕ್‌ಗೆ ಸಾಧ್ಯವಾಗುತ್ತಿರಲಿಲ್ಲ. ಪಕ್ಕದಲ್ಲಿರುವ ವ್ಯಕ್ತಿ ಯುವಕನಾಗಿದ್ದ ಮತ್ತು ಕಟ್ಟುಮಸ್ತಾದ ದೇಹದಾರ್ಢ್ಯವನ್ನು ಹೊಂದಿದ್ದು ಆಟಗಾರನಂತಿದ್ದ. ಅವನು ಅತ್ಯಂತ ಸಾಧಾರಣ ವ್ಯಕ್ತಿಯಂತೆ ಕಂಡುಬಂದ, ಹಳ್ಳಿಯ ಹುಡುಗನೊಬ್ಬ ಪಟ್ಟಣದ ಮೇಲು ದರ್ಜೆಯ ಶಾಲೆಯಲ್ಲಿ ಹೇಗೆ ಕಂಡುಬರುತ್ತಾನೋ ಹಾಗೆಯೇ ಅನ್ನಿಸುತ್ತಿತ್ತು ವಿವೇಕ್‌ಗೆ ಆತನನ್ನು ನೋಡಿದಾಗ. ಪ್ರಾಯಶಃ ಈತ ರೈಲ್ವೆ ಆಟಗಾರನಾಗಿದ್ದು ತನ್ನ ಉಚಿತ ರೈಲ್ವೆ ಪಾಸಿನ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾನೆ ಎಂದುಕೊಂಡ ವಿವೇಕ್. ಮತ್ತೆ ಪಕ್ಕದ ವ್ಯಕ್ತಿ "ನಿಮ್ಮನ್ನೆಲ್ಲ ನೋಡಿದರೆ ನನಗೆ ಯಾವಾಗಲೂ ಆಶ್ಚರ್ಯವಾಗುತ್ತದೆ. ಆಫೀಸಿನ ಒಂದು ಮೂಲೆಯಲ್ಲಿ ಕುಳಿತುಕೊಂಡು ಕಂಪ್ಯೂಟರ್‌ನಲ್ಲಿ ಏನನ್ನೋ ಬರೆಯುತ್ತಿರುತ್ತೀರಿ, ಅದು ನೋಡಿದರೆ ಹೊರ ಪ್ರಪಂಚದಲ್ಲಿ ಏನೇನೋ ಅದ್ಭುತವಾದ ಕೆಲಸಗಳನ್ನು ಮಾಡುತ್ತದೆ". ವಿವೇಕ್ ಒಮ್ಮೆ ವ್ಯಂಗ್ಯವಾಗಿ ನಕ್ಕ. ಈ ವ್ಯಕ್ತಿಯ ಅಪ್ರಾಪ್ತ ತಿಳುವಳಿಕೆಗೆ ಬೇಕಾಗಿರುವುದು ಸಿಟ್ಟಲ್ಲ, ಬದಲಿಗೆ ಕಂಪ್ಯೂಟರ್ ಕ್ಷೇತ್ರದ ಬಗೆಗಿನ ಬೋಧನೆ ಎಂದು ನಿರ್ಧರಿಸಿ "ನೀವು ತಿಳಿದುಕೊಂಡಿರುವಷ್ಟು ಸುಲಭವಲ್ಲ ನಮ್ಮ ಕೆಲಸ. ಕೇವಲ ಒಂದಷ್ಟು ಸಾಲುಗಳನ್ನು ಬರೆದು ಸುಮ್ಮನಿರುವುದಲ್ಲ, ಅದರ ಹಿನ್ನೆಲೆಯಲ್ಲಿ ಆಗಬೇಕಾದ

ಚಾಣಾಕ್ಷ ಕೆಲಸಗಳು ಬಹಳಷ್ಟಿವೆ” ಎಂದ. ಒಂದು ಕ್ಷಣ ವಿವೇಕ್‌ಗೆ ಇಡೀ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಸೈಕಲ್ ಅನ್ನು ವಿವರಿಸಬೇಕೆಂದೆನಿಸಿದರೂ ತನ್ನನ್ನು ತಾನೇ ತಡೆದುಕೊಂಡು ಇಷ್ಟೇ ಹೇಳಿದ “ನಮ್ಮ ಕೆಲಸ ಕಷ್ಟ, ಅತ್ಯಂತ ಕಷ್ಟ”. “ಹೌದು ನೀವು ಹೇಳುವುದು ಖಂಡಿತ ಸತ್ಯ, ಅಷ್ಟಲ್ಲದೇ ನಿಮಗೆ ಅಷ್ಟು ದೊಡ್ಡ ಸಂಬಳವನ್ನು ಕೊಡುತ್ತಾರೆಯೇ?” ಎಂದ ಪಕ್ಕದ ವ್ಯಕ್ತಿ.

> ನನಗೆ ಗೊತ್ತು ಸಾರ್. “ಲೈನ್ ಆಫ್ ಫೈರ್”ನಲ್ಲಿ ಇರೋದು ಹೇಗೆ ಅಂತ” ಎಂದ. ಎದುರಿಗಿದ್ದ ವ್ಯಕ್ತಿ. ವಿವೇಕ್ ಗೆ ಈ ಮಾತನ್ನು ಕೇಳಿ ಸುತ್ತಮುತ್ತ ರೈಲಿನಲ್ಲಿ ಯಾರೂ ಇಲ್ಲವೆಂದೆನಿಸಿತು. ರೈಲೂ ಕೂಡ ಇಲ್ಲವೆಂದೆನಿಸಿ..... ಪೂರ ಶೂನ್ಯವೇ ಗೋಚರಿಸಿದಂತಾಯಿತು.

ಈ ಸಂಭಾಷಣೆ ಏಕೋ ನಾನಂದುಕೊಂಡ ಹಾಗೆ ನಡೆಯುತ್ತಿಲ್ಲವೆಂದೆನಿಸಿತು ವಿವೇಕ್‌ಗೆ. ಇದುವರೆಗೂ ಶಾಂತನಾಗಿದ್ದ ಅವನ ಮನದಲ್ಲಿ ಕೋಪದ ಕಿಡಿ ಏಳಲಾರಂಭಿಸಿತು. ಅವನು ಸ್ವಲ್ಪ ಎತ್ತರದ ದನಿಯಲ್ಲೆ ಮಾತನಾಡಿದ. “ಎಲ್ಲರೂ ಹಣವನ್ನೇ ನೋಡುತ್ತಾರೆ, ನಾವು ಪಡುವ ಕಷ್ಟ ಮತ್ತು ನಮ್ಮ ವೈಯಕ್ತಿಕ ಸುಖವನ್ನು ಬದಿಗಿಟ್ಟು ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಯಾರಿಗೂ ತಿಳಿಯುವುದೇ ಇಲ್ಲ. ಭಾರತೀಯರಿಗೆ ಕಷ್ಟದ ಕೆಲಸದ ಬಗ್ಗೆ ಇರುವ ದೃಷ್ಟಿಯೇ ಅತ್ಯಂತ ಕಿರಿದು, ನಾವುಗಳು ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಕೆಲಸ ಮಾಡುತ್ತೇವೆ ಎಂದ ಮಾತ್ರಕ್ಕೆ ನಮಗೂ ಬೆವರು ಬರುವುದಿಲ್ಲವೆಂದಲ್ಲ. ನೀವು ದೇಹವನ್ನು ದಂಡಿಸುತ್ತೀರಿ ನಾವು ನಮ್ಮ ಮನಸ್ಸುಗಳನ್ನು ದಂಡಿಸುತ್ತೇವೆ. ಅದೂ ಕೂಡ ಅಷ್ಟೇ ತ್ರಾಸದಾಯಕವಾದುದು ತಿಳಿದುಕೊಳ್ಳಿ”.

ವಿವೇಕ್‌ಗೆ, ತಾನು ಈಗ ಈ ಮನುಷ್ಯನನ್ನು ತಾನಂದುಕೊಂಡ ಮನಃಸ್ಥಿತಿಗೆ ತಂದಿದ್ದೇನೆ...... ಇನ್ನು ನನ್ನ ಮಾತಿಗೆ ತಕ್ಕಂತೆ ಈತನನ್ನು ನಂಬಿಸಬಹುದು ಎಂದುಕೊಂಡು, “ಉದಾಹರಣೆಗೆ ಈ ರೈಲನ್ನೇ ತೆಗೆದುಕೊಳ್ಳಿ. ಇಡೀ ರೈಲ್ವೇ ಬುಕಿಂಗ್ ನ್ನು ಕಂಪ್ಯೂಟರೀಕರಿಸಲಾಗಿದೆ. ದೇಶದ ಯಾವುದೇ ಮೂಲೆಯಲ್ಲಿರುವ ಬುಕಿಂಗ್ ಕೇಂದ್ರದಿಂದ ಯಾವುದೇ ಎರಡು ನಿಲ್ದಾಣಗಳ ನಡುವೆ ಟಿಕೇಟ್ ಬುಕ್ ಮಾಡಬಹುದು ಕ್ಷಣ ಮಾತ್ರದಲ್ಲಿ. ಇಂತಹ ಒಂದು ಕಂಪ್ಯೂಟರ್ ವ್ಯವಸ್ಥೆಯನ್ನು ನಿರ್ಮಿಸಲು ಸಂಕೀರ್ಣವಾದ ತಂತ್ರಜ್ಞಾನವನ್ನು ಅರ್ಥ ಮಾಡಿಕೊಂಡು ಅದನ್ನು ಕೆಲಸ ಮಾಡುವಂತೆ ಮಾಡುವುದು ಎಷ್ಟು ಕಷ್ಟದ ಕೆಲಸ ಗೊತ್ತೇ!”

ಎದುರಿಗಿದ್ದ ವ್ಯಕ್ತಿ ವಿವೇಕ್‌ನ ಮಾತುಗಳನ್ನು ಕೇಳಿ ದಂಗು ಬಡಿದುಹೋಗಿದ್ದ, “ನೀವು ಇಂತಹ ವ್ಯವಸ್ಥೆಯನ್ನು ನಿರ್ಮಿಸುತ್ತೀರಾ...?”. ವಿವೇಕ್ ಹೇಳಿದ “ ನಾನು ಮೊದಲು ಮಾಡುತ್ತಿದ್ದೆ.... ಆದರೆ ಈಗ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದೇನೆ”.

“ಹಾಗಾದರೆ ಈಗ ನಿಮ್ಮ ಕೆಲಸ ಸುಲಭವಾಗಿದೆ” ಎಂದ ಎದುರಿಗಿದ್ದ ವ್ಯಕ್ತಿ. ವಿವೇಕ್‌ಗೆ ಈ ಮಾತನ್ನು ಕೇಳಿ ಸಿಟ್ಟು ಬಂದಂತಾಗಿ “ನೀವು ಉದ್ಯೋಗದಲ್ಲಿ ಮೇಲೆ ಹೋದಂತೆಲ್ಲಾ ಕೆಲಸ ಮತ್ತು ಜವಾಬ್ಧಾರಿ ಹೆಚ್ಚಾಗುತ್ತದೆಯೇ ಹೊರತು, ಕಡಿಮೆಯಾಗುವುದಿಲ್ಲ”. ಮೊದಲಾದರೆ ನಾನೇ ಕೆಲಸವನ್ನು ಮಾಡುತ್ತಿದ್ದೆ, ಆದರೆ ಈಗ ಇನ್ನೊಬ್ಬರ ಕೈಯಿಂದ ಮಾಡಿಸಬೇಕು. ಅದೂ ಅತ್ಯಂತ ಕಡಿಮೆ ಸಮಯದಲ್ಲಿ ಮತ್ತು ಉತ್ತಮ ಗುಣಮಟ್ಟದೊಂದಿಗೆ, ಇದು ಅತ್ಯಂತ ಒತ್ತಡಕಾರಿಯಾದ ಕೆಲಸ. ಒಂದು ಕಡೆ ಯಾವಾಗಲೂ ಹೊಸದನ್ನೇ ಬಯಸುವ ಗ್ರಾಹಕರು, ಮತ್ತೊಂದೆಡೆ ಕೆಲಸ ಬೇಗ ಬೇಗ ಮುಗಿಸು ಎಂದು ಒತ್ತಡ ಹೇರುವ ನನ್ನ ಮೇಲಿನವರು.... ಗೆಳೆಯ ನಿನಗೆ ನನ್ನ ಜೀವನ “ಲೈನ್ ಆಫ್ ಫೈರ್” ನಲ್ಲಿದೆಯೆಂದು ಹೇಗೆ ತಿಳಿಸಿ ಹೇಳಲಿ?”





ಎದುರಿಗಿದ್ದ ವ್ಯಕ್ತಿ ತಕ್ಷಣ ನನಗೆ ಗೊತ್ತು ಸಾರ್. “ಲೈನ್ ಆಫ್ ಫೈರ್”ನಲ್ಲಿ ಇರೋದು ಹೇಗೆ ಅಂತ” ಎಂದ. ವಿವೇಕ್ ಗೆ ಈ ಮಾತನ್ನು ಕೇಳಿ ಸುತ್ತಮುತ್ತ ರೈಲಿನಲ್ಲಿ ಯಾರೂ ಇಲ್ಲವೆಂದೆನಿಸಿತು. ರೈಲೂ ಕೂಡ ಇಲ್ಲವೆಂದೆನಿಸಿ..... ಪೂರ ಶೂನ್ಯವೇ ಗೋಚರಿಸಿದಂತಾಯಿತು.

ಆ ವ್ಯಕ್ತಿ ಮುಂದುವರಿಸುತ್ತಾ “ನಮ್ಮ ತಂಡಕ್ಕೆ ಪಾಯಿಂಟ್ 4875 ನ್ನು ಕ್ಯಾಪ್ಚರ್ ಮಾಡಲು ಕರೆ ಬಂದಾಗ ರಾತ್ರಿ ಸಮಯದಲ್ಲಿ 30 ಮಂದಿ ಇದ್ದೆವು. ಶತ್ರು ಪಡೆಯವರು ಮೇಲಿನಿಂದ ಗುಂಡಿನ ಸುರಿಮಳೆಯನ್ನೇ ನಡೆಸಿದ್ದರು. ಮುಂದಿನ ಗುಂಡು ಯಾವ ದಿಕ್ಕಿನಿಂದ ಯಾರ ಬಂದೂಕಿನಿಂದ ಬರುತ್ತದೆಂದು ಊಹಿಸಲಾಗುತ್ತಿರಲಿಲ್ಲ. ಬೆಳಗ್ಗೆ ತ್ರಿವರ್ಣ ಧ್ವಜವನ್ನು ಉತ್ತುಂಗದಲ್ಲಿ ಏರಿಸಿದಾಗ ನಾವು ಬದುಕಿದ್ದವರು ಕೇವಲ 4 ಮಂದಿ ಮಾತ್ರ”.

“ನೀವು ಒಬ್ಬ ಯೋ.......”

“ನಾನು ಸುಭೇದಾರ್ ಸುಶಾಂತ್...... “13 ಜೆ ಎಂಡ್ ಕೆ ರೈಫಲ್ಸ್”, ಪೀಕ್ 4875 ಕಾರ್ಗಿಲ್ ನಿಂದ ನಾನು ನನ್ನ ಜವಾಬ್ದಾರಿಯನ್ನು ಮುಗಿಸಿದ್ದೇನೆಂದು ನನಗೆ ಬೇರೆ ಸುಲಭವಾದ ಶಾಂತಿಯುತ ಕೆಲಸವನ್ನು ವಹಿಸುತ್ತೇವೆ ಎಂದಿದ್ದಾರೆ. ಆದರೆ ನೀವೇ ಹೇಳಿ ಸಾರ್. ಯಾರು ತಾನೆ ನಮ್ಮ ಜೀವನ ಸುಲಭವಾಗುತ್ತದೆಂದು ಇರುವ ಕೆಲಸದಿಂದ ಹಿಂಜರಿಯುತ್ತಾರೆ? ಆ ದಿನ ಬೆಳಗ್ಗೆ ನಮ್ಮ ಸಂಗಾತಿಯೊಬ್ಬ ಶತ್ರು ಗುಂಡಿಗೆ ಏಟು ತಿಂದು ಕೊರೆಯುವ ಮಂಜಿನಲ್ಲಿ ಬಿದ್ದಿದ್ದ. ನನ್ನ ಕೆಲಸ ಆತನನ್ನು ಕರೆದು ತಂದು ಸುರಕ್ಷಿತ ಸ್ಥಳಕ್ಕೆ ತಲುಪಿಸುವುದಾಗಿತ್ತು. ಆದರೆ ನನ್ನ ಕ್ಯಾಪ್ಟನ್ ಸಾಹಿಬ್ ನನಗೆ ಅನುಮತಿ ನೀಡಲಿಲ್ಲ. ತಾನೇ ಹೋಗಿ ಗಾಯಾಳುವನ್ನು ಕರೆತಂದ. ಆತನಿಗೆ ಮೊದಲು ದೇಶದ ಸುರಕ್ಷತೆ, ನಂತರ ಸಹಚಾರಿಗಳ ಸುರಕ್ಷತೆ ಮತ್ತು ಕೊನೆಯಲ್ಲಿ ತನ್ನ ಸುರಕ್ಷತೆಯ ಆದ್ಯತೆಯನ್ನು ಪಾಲಿಸುತ್ತಿದ್ದ. ಹೀಗೆಂದು ಆತ ‘ಜಂಟ್ಲ್ ಮ್ಯಾನ್ ಕೆಡೆಟ್’ ಆದಾಗ ಶಪಥ ತೆಗೆದುಕೊಂಡಿದ್ದನಂತೆ.

ಆದರೆ ಆತ ಗಾಯಾಳುವನ್ನು ಕರೆದು ತರುವಾಗ ಶತ್ರುಗಳ ಗುಂಡೇಟಿಗೆ ಬಲಿಯಾಗಿ ಹುತಾತ್ಮನಾದ. ಈಗಲೂ ಪ್ರತಿ ಮುಂಜಾನೆ ಗಾರ್ಡ್ ತೆಗೆದುಕೊಳ್ಳಲು ನಿಂತಾಗ, ಆತ ನನಗಾಗಿ ಇದ್ದ ಗುಂಡುಗಳನ್ನು ತನ್ನ ದೇಹದಿಂದ ಹೊರ ತೆಗೆಯುವ ದೃಶ್ಯ ಕಣ್ಮುಂದೆ ಬರುತ್ತದೆ....... ನನಗೆ ಗೊತ್ತು ಚೆನ್ನಾಗಿ ಗೊತ್ತು ಸಾರ್ .... Line of fire ....ನಲ್ಲಿ ಇರುವುದು ಹೇಗೆ ಎಂದು”.



ವಿವೇಕ್‌ಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತೋಚದೆ, ಮೊದಲು ತನ್ನ ಲ್ಯಾಪ್ ಟಾಪನ್ನು ಆಫ್ ಮಾಡಿದ. ಅಂತಹ ವ್ಯಕ್ತಿಯ ಮುಂದೆ ತನ್ನ ಕೆಲಸದ ಜಂಭದ ಮಾತುಗಳು ತುಚ್ಛವೆನಿಸತೊಡಗಿತು.

ರೈಲು ನಿಧಾನವಾಗಿ ನಿಲ್ಲಲು ಆರಂಭವಾಯಿತು. ಸುಭೇದಾರ್ ಸುಶಾಂತ್ ಇಳಿಯುತ್ತಾ “ನಿಮ್ಮನ್ನು ಭೇಟಿಯಾದದ್ದು ಖುಷಿಯಾಯಿತು” ಎಂದಷ್ಟೆ ಹೇಳಿದ. ವಿವೇಕ್‌ನ ಕೈಗಳು ನಡುಗುತ್ತಿದ್ದವು ಹ್ಯಾಂಡ್ ಶೇಕ್ ಮಾಡಿದಾಗ. ಈ ಕೈಗಳು ಪರ್ವತಗಳನ್ನು ಹತ್ತಿವೆ, ಬಂದೂಕನ್ನು ಚಲಾಯಿಸಿವೆ. ಧ್ವಜವನ್ನೂ ಏರಿಸಿವೆ. ಇದ್ದಕ್ಕಿದಂತೆ ಆತನ ಬಲಗೈ ಸೆಲ್ಯೂಟ್ ಮಾಡಿತು.

***ವಿ.ಸೂ ; ಇದು ಸತ್ಯವಾದ ಘಟನೆ. ಪೀಕ್ 4875 ನ್ನು ಕಾರ್ಗಿಲ್ ಯುದ್ಧದಲ್ಲಿ ವಶಪಡಿಸಿಕೊಂಡ ಸಂದರ್ಭದಲ್ಲಿ ಕ್ಯಾಪ್ಟನ್ ಬಾತ್ರಾ ಇನ್ನೇನು ಗೆಲುವಿನ ಅಂಚಿನಲ್ಲಿದ್ದಾಗ ಸಹಚಾರಿಯನ್ನು ಬದುಕಿಸಲು ಹೋಗಿ ಹುತಾತ್ಮರಾದರು. ಅವರಿಗೆ ಪರಮ್ ವೀರ ಚಕ್ರ ಪ್ರಶಸ್ತಿ ಲಭಿಸಿತು.***

** ನಮ್ಮ ಸುತ್ತಮುತ್ತ ಮಹಾತ್ಮರು ಬದುಕುತ್ತಿರುತ್ತಾರೆ. ಯಾವಾಗಲೂ ತಗ್ಗಿ ಬಗ್ಗಿ ನಡೆಯುವುದನ್ನು ಕಲಿಯಿರಿ.